
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಚೆನ್ನೈನಲ್ಲಿ ಶನಿವಾರ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ಅರ್ಧ ಶತಕ (57 ರನ್) ಗಳಿಸಿದ ಮುಂಬೈ ಇಂಡಿಯನ್ಸ್ ತಂಡದ ನಮನ್ ಧೀರ್...

03 ಮೇ 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 53 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಎಲ್ಲೆಲ್ಲೂ ಎಲ್ ನಿನೋ ತಂದಿಟ್ಟಿರುವ ಎಡವಟ್ಟು! » 2



ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ವಿರೋಧ: ಬಿಜೆಪಿ ಪ್ರತಿಭಟನೆ » 3



ನೇಪಾಳದಲ್ಲಿ 2 ಸಾವಿರ ಅಕ್ರಮ ಕಟ್ಟಡಗಳ ತೆರವು

# ಘೋಷಣೆ ಅನುಷ್ಠಾನ ವಿಳಂಬವಾದರೆ ಕಾರ್ಯದರ್ಶಿಗಳೇ ಹೊಣೆ

## ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ | ಕಳೆದ ವರ್ಷದ 15 ಯೋಜನೆ ವಿಳಂಬ

• ಪ್ರಜೋದಯ ವರದಿ

**ಬೆಂಗಳೂರು:** ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾದ ಎಲ್ಲಾ ಯೋಜನೆಗಳನ್ನು ಮೇ ತಿಂಗಳ ಒಳಗಾಗಿ ಜಾರಿಗೊಳಿಸಿ-ಅನುಷ್ಠಾನ ಕಾರ್ಯ ಆರಂಭಿಸದಿದ್ದರೆ ಆಯಾ ಕಾರ್ಯ ದರ್ಶಿಗಳನ್ನೇ ಹೊಣೆಗಾರರನ್ನಾಗಿಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಚ್ಚರಿಕೆ ನೀಡಿದ್ದಾರೆ.

ವಿಧಾನಸೌಧದ ಸಭಾಂಗಣದಲ್ಲಿ ಶನಿವಾರ ವಿವಿಧ ಇಲಾಖೆಗಳ ಕಾರ್ಯಚಟುವಟಿಕೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು, 2026-27ನೇ ಸಾಲಿನ ಬಜೆಟ್ ಘೋಷಣೆಗಳ ಪೈಕಿ ಐದು ಘೋಷಣೆಗಳ ಬಗ್ಗೆ ಮಾತ್ರ ಸರ್ಕಾರಿ ಆದೇಶ ಮಾಡಲಾಗಿದೆ. ಮೇ ತಿಂಗಳೊಳಗೆ ಎಲ್ಲಾ ಸರ್ಕಾರಿ ಆದೇಶಗಳನ್ನು ಜಾರಿಗೊಳಿಸಿ, ಅನುಷ್ಠಾನ ಕಾರ್ಯ ಆರಂಭಿಸಬೇಕೆಂದು ಸರ್ಕಾರದ ಹೆಚ್ಚುವರಿ ಮುಖ್ಯ, ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯ ದರ್ಶಿಗಳಿಗೆ ಸೂಚಿಸಿದರು.

ಕಳೆದ ವರ್ಷದ 15 ಘೋಷಣೆಗಳು ಇನ್ನೂ ಜಾರಿ ಆಗಿಲ್ಲ. ಅದಕ್ಕೆ ಯಾರು ಹೊಣೆ ಎಂದು ಪ್ರಶ್ನಿಸಿದರು. ಈ ವರ್ಷದ ಬಜೆಟ್‌ನಲ್ಲಿ 218 ಹೊಸ ಘೋಷಣೆಗಳು ಸೇರಿ 565 ಘೋಷಣೆ ಮಾಡಿದ್ದೇವೆ. ಎಲ್ಲಾ ಘೋಷಣೆಗಳನ್ನು ಅದೇ ವರ್ಷ ಜಾರಿಗೊಳಿಸುವುದು ಅಧಿಕಾರಿಗಳ ಜವಾಬ್ದಾರಿ. ಬಜೆಟ್ ಘೋಷಣೆಗಳು



ಯಾವುದೇ ಕಾರಣಕ್ಕೂ ಅನುಷ್ಠಾನಗೊಳ್ಳದೆ ಇರ ಬಾರದು. ಅನುಷ್ಠಾನದಲ್ಲಿ ಪ್ರಾಯೋಗಿಕ ತೊಡಕುಗಳು ಎದುರಾದರೆ ನೇರವಾಗಿ ನನ್ನ ಅಥವಾ ಮುಖ್ಯ ಕಾರ್ಯದರ್ಶಿಯ ಗಮನಕ್ಕೆ ತರಬೇಕೆಂದು ಸಲಹೆ ನೀಡಿದರು.

ಅಧಿಕಾರಕ್ಕೆ ಬಂದ ಬಳಿಕ ರಾಜ್ಯ ಮಟ್ಟದಲ್ಲಿ ಎರಡು ಜನಸ್ಪಂದನ ಸಭೆಯಲ್ಲಿ ಸ್ವೀಕರಿಸಲಾಗಿದ್ದ 15,334 ಅರ್ಜಿಗಳ ಪೈಕಿ, 15,295 ನ್ನು ವಿಲೇವಾರಿ ಮಾಡಲಾಗಿದೆ. ಬಾಕಿ 45 ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಸಾರ್ವಜನಿಕ ಕುಂದು ಕೊರತೆಯಡಿ 3,27,052 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, 3,17,576 ವಿಲೇವಾರಿ ಮಾಡಲಾಗಿದೆ. 1,828 ಅರ್ಜಿಗಳ ವಿಲೇವಾರಿ ನಿಗದಿತ ಕಾಲಾವಧಿ ಮುಗಿದಿದೆ. ಸಾರ್ವಜನಿಕರ

> **ಗೃಹ ಸಚಿವರಾಗಿದ್ದ ವಲ್ಲಭ ಬಾಯ್ ಪಟೇಲ್ ಅವರು, ಕಾರ್ಯದರ್ಶಿಗಳು ನಿರ್ಭಯವಾಗಿ ಸ್ವತಂತ್ರವಾಗಿ ತಮ್ಮ ಅಭಿಪ್ರಾಯಗಳನ್ನು ಮಂತ್ರಿಗಳಿಗೆ ತಿಳಿಸಬೇಕು. ಮಂತ್ರಿ ಅಸಮಾಧಾನ ಗೊಳ್ಳುತ್ತಾರೆಂದು ಸತ್ಯ ಹೇಳುವುದರಿಂದ ಹಿಂಜರಿಯಬಾರದೆಂದು ಸಂವಿಧಾನ ಸಭೆಯಲ್ಲಿ ಹೇಳಿದ್ದರು. ಅದರಂತೆ ಹಿರಿಯ ಅಧಿಕಾರಿಗಳು ನಿಮ್ಮ ಅಭಿಪ್ರಾಯಗಳನ್ನು ನಿರ್ಭಯವಾಗಿ, ಸ್ವತಂತ್ರವಾಗಿ ಸತ್ಯವಾಗಿ ಹೇಳಬೇಕು.**
> **-ಸಿದ್ದರಾಮಯ್ಯ, ಮುಖ್ಯಮಂತ್ರಿ**

ಕುಂದುಕೊರತೆಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡದಿದ್ದರೆ ಜನರಿಗೆ ಸರ್ಕಾರದ ಮೇಲಿನ ನಂಬಿಕೆಯೇ ಹೊರಟು ಹೋಗುತ್ತದೆ. ಅದಕ್ಕೆ ಅವಕಾಶ ಮಾಡಬಾರದು. ಸಕಾಲ ಅಡಿ ಸ್ವೀಕರಿಸಲಾಗುವ ಅರ್ಜಿಗಳನ್ನೂ ಸಕಾಲದಲ್ಲಿಯೇ ವಿಲೇವಾರಿ ಮಾಡಬೇಕು ಎಂದರು.

ಕೇಂದ್ರ ಪುರಸ್ಕೃತ ವಿವಿಧ ಕಾರ್ಯಕ್ರಮಗಳಡಿಯಲ್ಲಿ 2025-26ನೇ ಸಾಲಿನಲ್ಲಿ ರಾಜ್ಯ ಸರ್ಕಾರ ತನ್ನ ಪಾಲಿನ 22,768 ಕೋಟಿ ರೂ., ಕೇಂದ್ರ ಸರ್ಕಾರ 16,729 ಕೋಟಿ ರೂ. ಬಿಡುಗಡೆ ಮಾಡಿದೆ. ಕೇಂದ್ರದಿಂದ 11,367 ಕೋಟಿ ರೂ. ಬಿಡುಗಡೆಗೆ ಬಾಕಿಯಿದೆ. ಈ ಅವಧಿಯಲ್ಲಿ ಒಟ್ಟಾರೆ 42,222 ಕೋಟಿ ರೂ. ಲಭ್ಯ ಅನುದಾನವಿದ್ದು, 38,236 ಕೋಟಿ ರೂ. ವೆಚ್ಚ ಮಾಡ ಲಾಗಿದೆ. ಅನುದಾನವನ್ನು ನಿಗದಿತ ಅವಧಿಯ ಒಳಗೆ ಖರ್ಚು ಮಾಡಲು ಕ್ರಮ ತೆಗೆದು ಕೊಳ್ಳಬೇಕೆಂದರು.

ಈ ವರ್ಷ ಮಳೆ ಶೇ.5ರಷ್ಟು ಮಳೆ ಕಡಿಮೆ ಯಾಗುವ ಸಾಧ್ಯತೆಯಿದೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ನಿರಂತರ ನಿಗಾವಹಿಸಬೇಕು. ಈ ಕುರಿತು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಜೊತೆ ಸಭೆ ನಡೆಸಬೇಕು. ತಮ್ಮ ಉಸ್ತುವಾರಿ ಜಿಲ್ಲೆಯ ಸಮಸ್ಯೆಗಳನ್ನು ಬಗೆಹರಿಸುವುದು ಆಯಾ ಕಾರ್ಯದರ್ಶಿಗಳ ಜವಾಬ್ದಾರಿ. ಯಾವುದೇ ಕಾರಣಕ್ಕೂ ಕುಡಿ ಯುವ ನೀರಿಗೆ ತೊಂದರೆ ಆಗಬಾರದೆಂದು ಸೂಚನೆ ನೀಡಿದರು.

**ತಕ್ಷಣ ಕ್ರಮ ಕೈಗೊಳ್ಳಿ**


ಈಗಾಗಲೇ ಮಂಜೂರಾತಿ ನೀಡಿರುವ ಹುದ್ದೆಗಳ ಭರ್ತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ಆರ್ಥಿಕ ಇಲಾಖೆಯಿಂದ 24,300 ಹುದ್ದೆಗಳ ಭರ್ತಿಗೆ ಮಂಜೂರಾತಿ ನೀಡಲಾಗಿದೆ. ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ವೃಂದ ದಲ್ಲಿ ನೇಮಕಾತಿ ಪ್ರಕ್ರಿಯೆ ಆರಂಭವಾಗದೇ ಬಾಕಿಯಿರುವ 32,132 ಹುದ್ದೆಗಳಿವೆ. ಕೆಲವು ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿ ಪರಿಷ್ಕರಣೆ ಬಾಕಿಯಿದ್ದು, ಇದನ್ನು ಆದಷ್ಟು ಬೇಗ ಮುಗಿಸಬೇಕು ಎಂದರು.

### ರಾಜಕಾರಣಿಗಳ ಓಲೈಕೆ ಮಾಡಬೇಡಿ

ಕಾನೂನಿನ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ಸಚಿವರಿಗೆ ಕಾನೂನಿನ ವ್ಯಾಪ್ತಿಯೊಳಗೆ ಸಲಹೆಗಳನ್ನು ನೀಡಬೇಕು. ಸಂವಿಧಾನದ ಆಶಯಗಳ ಪ್ರಕಾರ ಕಾರ್ಯ ನಿರ್ವಹಿಸಬೇಕಾದುದು ಕಾರ್ಯದರ್ಶಿಗಳ ಕರ್ತವ್ಯ. ಸಂವಿಧಾನಕ್ಕೆ ವಿರುದ್ಧವಾದ ಯಾವುದೇ ಕಾರ್ಯವನ್ನು ಮಾಡಬಾರದು. ಹಿರಿಯ ಅಧಿಕಾರಿಗಳು ತಮ್ಮ ಅಭಿಪ್ರಾಯಗಳನ್ನು ನಿರ್ಭಯವಾಗಿ, ಸ್ವತಂತ್ರವಾಗಿ, ಸತ್ಯವಾಗಿ ಹೇಳಬೇಕು. ಆಡಳಿತಕ್ಕೆ ಇನ್ನಷ್ಟು ಚುರುಕು ನೀಡಬೇಕು ಎಂದೂ ಮುಖ್ಯಮಂತ್ರಿ ಸಲಹೆ ನೀಡಿದರು.

ಅಧಿಕಾರಿಗಳು ಯಾವತ್ತೂ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಬಾರದು ಹಾಗು ತಪ್ಪು ಹಾದಿಗೆ ಎಳೆಯಬಾರದು. ನಮ್ಮ ನಿಲುವುಗಳು, ತೀರ್ಮಾನಗಳು ಯಾವತ್ತೂ ಜನಪರವಾಗಿರಬೇಕು. ಅಧಿಕಾರಿಗಳು 30-35 ವರ್ಷಗಳ ಕಾಲ ಆಡಳಿತ ವ್ಯವಸ್ಥೆಯಲ್ಲಿದ್ದರೆ, ಜನಪ್ರತಿನಿಧಿಗಳು ಕೇವಲ ಐದು ವರ್ಷ ಮಾತ್ರ ಇರುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಿಗಳ ಜವಾ ಬ್ದಾರಿ ಹೆಚ್ಚಾಗಿದೆ ಎಂದರು.

## ಮೇ 6 ರಂದು ಅಭಿನಂದನಾ ಸಮಾರಂಭ



• ಪ್ರಜೋದಯ ವರದಿ

**ಹಾಸನ:** ಎಸ್‌ಎಸ್‌ಎಲ್‌ಸಿ ಹಾಗು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದ ಸರ್ಕಾರಿ, ಅನುದಾನಿತ ಶಾಲಾ ವಿದ್ಯಾರ್ಥಿಗಳು, ಕಳೆದ ಮೂರು ವರ್ಷಗಳಿಂದ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಪಡೆದಿರುವ ಶಾಲೆಗಳಿಗೆ ಅಭಿನಂದನಾ ಸಮಾರಂಭವನ್ನು ಮೇ 6ರಂದು ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ಕಾರ್ಯಕ್ರಮ ಕುರಿತು ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಹಾಸನಾಂಬ ಕಲಾಕ್ಷೇತ್ರದಲ್ಲಿ ಸಮಾರಂಭ ನಡೆಯಲಿದ್ದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ನೇತೃತ್ವ ವಹಿಸಲಿದ್ದಾರೆಂದರು.

ಪ್ರತಿ ತಾಲ್ಲೂಕಿನಿಂದ ಸರ್ಕಾರಿ ಶಾಲೆಯ ಮೂರು ವಿದ್ಯಾರ್ಥಿಗಳು ಹಾಗು ಅನುದಾನಿತ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಸೇರಿ ಐದು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕು. ಆರ್‌ಟಿಇ ಮೂಲಕ ಖಾಸಗಿ ಶಾಲೆಗಳಲ್ಲಿ ಪ್ರವೇಶ ಪಡೆದು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಾಧನೆಗೈದ ಪ್ರತಿ ತಾಲ್ಲೂಕಿಗೆ ಒಬ್ಬರಂತೆ 8 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಸೂಚಿಸಿದರು.

ಬಿಸಿಎಂ, ಸಮಾಜ ಕಲ್ಯಾಣ ಇಲಾಖೆ ಹಾಗು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ ವಿದ್ಯಾರ್ಥಿಗಳಲ್ಲಿ ತಲಾ ಒಬ್ಬರನ್ನು ಆಯ್ಕೆ ಮಾಡುವಂತೆ ತಿಳಿಸಿದರಲ್ಲದೆ, ಬಾಲಕರ ಮತ್ತು ಬಾಲಕಿಯರ ಬಾಲಮಂದಿರದಲ್ಲಿ ಸಾಧನೆ ಮಾಡಿದ ತಲಾ ಒಬ್ಬರನ್ನು ಆಯ್ಕೆ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎಸ್. ಬಲರಾಂ ಹಾಗೂ ಮೊದಲಾದವರಿದ್ದರು.

## ಎಂಸಿಇ: ಬಿ.ಆರ್.ಗುರುದೇವ್ ತಂಡದಿಂದ ಅಧಿಕಾರ ಸ್ವೀಕಾರ

• ಪ್ರಜೋದಯ ವರದಿ

**ಹಾಸನ:** ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷರಾಗಿ ಬಿ.ಆರ್. ಗುರುದೇವ್ ಹಾಗು ಇತರರು ಶನಿವಾರ ಅಧಿಕಾರ ಸ್ವೀಕರಿಸಿದರು.

ಅಧಿಕಾರದ ಕಿತ್ತಾಟದಿಂದ ಎರಡು ಬಣಗಳ ನಡುವೆ ಗೊಂದಲ ಏರ್ಪಟ್ಟು ಪ್ರಕರಣ ನ್ಯಾಯಾಲಯ ಮೆಟ್ಟಿಲೇರಿ ಇತ್ತೀಚೆಗೆ ಅಂತಿಮ ತೀರ್ಪು ಹೊರ ಬಿದ್ದಿದೆ. ಅದರನ್ವಯ ನಗರದ ಎಂ.ಜಿ.ರಸ್ತೆಯಲ್ಲಿರುವ ಆಡಳಿತ ಕಚೇರಿಗೆ ಎಂಸಿಇ ಮಾಜಿ ಅಧ್ಯಕ್ಷ ಹಾಗು ನಿರ್ದೇಶಕ ಅಶೋಕ್ ಹಾರನಹಳ್ಳಿ ನೇತೃತ್ವದಲ್ಲಿ 14 ನಿರ್ದೇಶಕರು ನಿಯ ಮಾನುಸಾರ ಅಧಿಕಾರ ಸ್ವೀಕರಿಸಿದರು. ಬಿ.ಆರ್.ಗುರುದೇವ್ ನೂತನ ಅಧ್ಯಕ್ಷರಾಗಿ, ಜಿ.ಟಿ. ಕುಮಾರ್ ಕಾರ್ಯದರ್ಶಿ ಮತ್ತು ಎಸ್.ಜೆ.ಶ್ರೀಧರ್ ಖಜಾಂಚಿ ಯಾಗಿ ಜವಾಬ್ದಾರಿ ವಹಿಸಿ ಕೊಂಡರು.

ಸುದ್ದಿಗಾರರೊಂದಿಗೆ ಮಾತನಾಡಿದ ನೂತನ ಅಧ್ಯಕ್ಷ ಬಿ.ಆರ್.ಗುರುದೇವ್ ಅವರು, ದೀರ್ಘಕಾಲ ನಡೆದ ಕಾನೂನು ಹೋರಾಟಕ್ಕೆ ನ್ಯಾಯ ದೊರೆತಿದೆ. ಎಲ್ಲಾ ನಿರ್ದೇಶಕರು



ಹಾಗು ಸದಸ್ಯರ ವಿಶ್ವಾಸ ಪಡೆದು ಅಭಿವೃದ್ಧಿಗೆ ಒತ್ತು ನೀಡುತ್ತೇವೆಂದರು.

ಹೈಕೋರ್ಟ್ ಆದೇಶದ ಪ್ರತಿ ಆಧಾರವಾಗಿ ಅಧಿಕಾರ ಸ್ವೀಕರಿಸಿದ್ದೇವೆ. ಕಚೇರಿಯ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿದ್ದು, ಕೆಲವು ಪ್ರಮುಖ ದಾಖಲೆ, ವಿಶೇಷವಾಗಿ ನಡಾವಳಿ ಪುಸ್ತಕ ಹಾಗು ಸದಸ್ಯರ ನೋಂದಣಿ ಪುಸ್ತಕ ಲಭ್ಯವಾಗಿಲ್ಲ. ಉಳಿದ ದಾಖಲೆಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆಂದರು.

ಆಡಳಿತ ಮಂಡಳಿ ಅಧಿಕಾರ ವಿವಾದಕ್ಕೆ ಸಂಬಂಧಿಸಿ ಹೈಕೋರ್ಟ್ ಆದೇಶ ನೀಡಿದ್ದು, ಅದರ ಆದೇಶದ ಪ್ರತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಅದರ ಅನ್ವಯ ಅಧಿಕಾರ ಸ್ವೀಕರಿಸಿದ್ದೇವೆ. ಅಧಿಕೃತವಾಗಿ ಸೋಮವಾರ ಪ್ರತಿ ಲಭ್ಯವಾಗಲಿದೆ. ಈ ವಿಚಾರದಲ್ಲಿ ಯಾವ ಗೊಂದ ಲಗಳಿಲ್ಲ ಎಂದು ಸ್ಪಷ್ಟಪಡಿಸಿದರು.

ನಿರ್ದೇಶಕರಾದ ಕೆ.ಪ್ರಭಾಕರ್, ಡಾ|| ಅರವಿಂದ್, ಕೆ.ಎಂ.ಶಿವಣ್ಣ, ಗುರಪ್ಪ, ಜಿ.ಆರ್.ಶ್ರೀನಿವಾಸ್, ಶ್ರೀಧರ್, ಹೆಚ್.ಸುರೇಶ್, ಬೂವನಹಳ್ಳಿ ಶ್ರೀನಿವಾಸ್ ಇತರ ನಿರ್ದೇಶಕರಿದ್ದರು.

### ವಾಣಿಜ್ಯ ಸಿಲಿಂಡ್‌ಗಳ ದರ ಏರಿಕೆ: ಕಾಫಿ-ಟೀ ಬೆಲೆಯೂ ಹೆಚ್ಚಳ

# ಗ್ಯಾಸ್ ಟ್ರಬಲ್: ಬಡವರಿಗೆ ದುಬಾರಿಯಾದ ಊಟ

**-ಕೆ.ಪಿ.ಸಾಗರ್ ರಾಜು**

• ಪ್ರಜೋದಯ ವರದಿ

**ಹಾಸನ:** ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಏಕಾಏಕಿ ಏರಿಕೆ ಮಾಡಿದ ಬಿಸಿ ನೇರವಾಗಿ ಊಟ, ಉಪಹಾರಕ್ಕಾಗಿ ಹೋಟೆಲ್, ಕ್ಯಾಂಟಿನ್‌ಗಳನ್ನು ಅವಲಂಬಿಸಿದ್ದ ಜನರಿಗೆ ತಟ್ಟಿದೆ.

ನಗರ ಸೇರಿ ಜಿಲ್ಲಾದ್ಯಂತ ಶನಿವಾರದಿಂದಲೇ ಹೋಟೆಲ್, ಕ್ಯಾಂಟೀನ್‌ಗಳಲ್ಲಿ ಕಾಫಿ, ಟೀ, ಉಪಹಾರ, ಊಟ ಸೇರಿ ಎಲ್ಲಾ ಬಗೆಯ ಆಹಾರ ಪದಾರ್ಥಗಳ ಬೆಲೆಯನ್ನು ಏರಿಕೆ ಮಾಡಿ, ಹೊಸ ದರಪಟ್ಟಿಯನ್ನು ಪ್ರಕಟಿಸಲಾಗಿದೆ. ಯಾವುದೇ ಹೋಟೆಲ್‌ಗೆ ಹೋದರೂ ಗ್ಯಾಸ್ ದರ ಏರಿಕೆ ಮಾಡಿರುವುದರಿಂದ ಆಹಾರ ಪದಾರ್ಥಗಳ ಬೆಲೆ ಹೆಚ್ಚಿಸಲಾಗಿದೆ ಎಂದು ಬರೆದು ಅಂಟಿಸಲಾಗಿದೆ. ಹೀಗಾಗಿ ಸಾಮಾನ್ಯ ಜನರಿಗೆ ದಿನನಿತ್ಯದ ಉಪಹಾರವೂ ದುಬಾರಿಯಾಗುತ್ತಿದೆ.




ಈ ಹಿಂದೆ 10-15 ರೂ. ಗೆ ಸಿಗುತ್ತಿದ್ದ ಟೀ-ಕಾಫಿ ಈಗ 20-25ರೂ.ಗೆ ಏರಿಕೆಯಾಗಿದೆ. ಕೆಲ ದೊಡ್ಡ ಹೋಟೆಲ್‌ಗಳಲ್ಲಿ ಇದು 40-50ರೂ.ಗೆ ತಲುಪಿದೆ. ಬೆಳಗ್ಗಿನ ಉಪಹಾರದ ದರ 40-50 ರೂ. ನಿಂದ 60-70 ರೂ. ಗೆ ಹಾಗು ಮಧ್ಯಾಹ್ನದ ಊಟ 80-100ರಿಂದ 120 ರೂ.ಗೆ ಏರಿಕೆಯಾಗಿದೆ. ದೋಸೆ, ಪೂರಿ, ಗೋಬಿ, ಫ್ರೈಡ್ ಪದಾರ್ಥಗಳು ಸೇರಿ ಗ್ಯಾಸ್ ಹೆಚ್ಚು ಬಳ ಸುವ ಆಹಾರ ಪದಾರ್ಥಗಳ ದರಗಳು ಪ್ರತಿ ಐಟಂಗೆ 10-20 ರೂ. ಹೆಚ್ಚಳ ಕಂಡಿವೆ.

ಗ್ಯಾಸ್ ದರ ಏರಿಕೆಯ ಹೊರೆ ಬಡ ಹಾಗು ಮಧ್ಯಮ ವರ್ಗದ ಜನರ ಮೇಲೆ ಬಿದ್ದಿದೆ. ದಿನಗೂಲಿ ಕಾರ್ಮಿಕರು, ವಿದ್ಯಾರ್ಥಿಗಳು, ಹೊರಗೆ ಊಟ ಮಾಡುವ ಉದ್ಯೋಗಿಗಳು ಈಗ ದಿನನಿತ್ಯದ ವೆಚ್ಚವನ್ನು ಕಡಿಮೆ ಮಾಡಲು ಪರದಾಡುವಂತಾಗಿದೆ. ಒಂದು ದಿನದ ಊಟದ ಖರ್ಚಿಗೆ 250 ರೂ. ಮೀರುತ್ತಿದೆ.

**ಬೆಲೆ ಏರಿಕೆ ಪ್ರಮಾಣ**

- ಮಾರ್ಚ್‌ನಲ್ಲಿ ಇದ್ದ ದರ-1,804 ರೂ.
- ಏಪ್ರಿಲ್ ತಿಂಗಳ ದರ-2,161 ರೂ.
- ಮೇ ತಿಂಗಳ ದರ-3,152 ರೂ.
- 2 ತಿಂಗಳಲ್ಲಿ ಒಟ್ಟು 1348 ರೂ. ಏರಿಕೆ

**ಮೂರು ಬಾರಿ ದರ ಏರಿಕೆ**

19 ಕೆ.ಜಿ. ವಾಣಿಜ್ಯ ಸಿಲಿಂಡರ್ ಬೆಲೆ ಒಂದೇ ಬಾರಿ ಸುಮಾರು 993 ರೂ. ಏರಿಕೆ ಮಾಡಿರು ವುದರಿಂದ ಒಂದು ಸಿಲಿಂಡರ್ ದರ 3,152 ರೂ.ಗೆ ತಲುಪಿದೆ. ಕಳೆದ ಮೂರು ತಿಂಗಳಲ್ಲಿ ಇದು ಮೂರನೇ ಬಾರಿ ಏರಿಕೆಯಾಗಿ ಒಟ್ಟು 1,348 ರೂ. ಹೆಚ್ಚಳ ಮಾಡಲಿದೆ. ಅದರ ಪರಿಣಾಮ ವಾಗಿ ಸಣ್ಣ ಕ್ಯಾಂಟೀನ್‌ಗಳಿಂದ ಹಿಡಿದು ದೊಡ್ಡ ಹೋಟೆಲ್‌ಗಳವರೆಗೂ ಎಲ್ಲರಿಗೂ ಖರ್ಚಿನ ಗ್ರಾಹಕರ ಮೇಲೆ ಹೊರಿಸಲಾಗಿದೆ.

**ಗೃಹ ಬಳಕೆ ಸಿಲಿಂಡರ್ ದರ ಏರಿಕೆ ಆತಂಕ**

ಗ್ಯಾಸ್ ದರ ಏರಿಕೆ ಆಹಾರ ಸರಪಳಿಯ ವ್ಯವಸ್ಥೆಯನ್ನೇ ಅಸ್ತವ್ಯಯಸ್ತಗೊಳಿಸಿದೆ. ಹೋಟೆಲ್ ಉದ್ಯಮ, ಸಣ್ಣ ವ್ಯಾಪಾರಿಗಳು ಮತ್ತು ಗ್ರಾಹಕರು ನೇರವಾಗಿ ಪರಿಣಾಮ ಎದುರಿಸುತ್ತಿದ್ದಾರೆ. ಸದ್ಯ ಈ ಬೆಲೆ ಏರಿಕೆ ವಾಣಿಜ್ಯ ಸಿಲಿಂಡರ್‌ಗಳಿಗೆ ಮಾತ್ರ ಅನ್ವಯವಾಗಿದ್ದು, ಗೃಹ ಬಳಕೆಯ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಇಲ್ಲ. ಸದ್ಯದಲ್ಲಿ ಗೃಹ ಬಳಕೆ ಸಿಲಿಂಡರ್ ದರ ಏರಿಕೆಯಾಗುವ ಆತಂಕ ವ್ಯಕ್ತವಾಗಿದೆ.

» ಮೂರನೇ ಪುಟದಲ್ಲಿ

## ಕೊಕ್ಕನಘಟ್ಟದಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಭೂಮಿಪೂಜೆ



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಕೊಕ್ಕನಘಟ್ಟ ಗ್ರಾಮದಲ್ಲಿ 15 ಲಕ್ಷ ರೂ. ಅನುದಾನದಲ್ಲಿ ನಿರ್ಮಿಸುತ್ತಿ ರುವ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಶಾಸಕ ಹೆಚ್.ಪಿ. ಸ್ವರೂಪ್ ಅವರು ಶನಿವಾರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಗ್ರಾಮದ ಮಹಿಳೆಯರೊಂದಿಗೆ ಮಾತುಕತೆ ನಡೆಸಿದ ಶಾಸಕರು, ಕುಡಿಯುವ ನೀರಿನ ಸಮಸ್ಯೆ ಕುರಿತು ಚರ್ಚಿಸಿದರು. ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ಬೇಸಿಗೆ ವೇಳೆ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ರಸ್ತೆ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು. ಗುಣಮಟ್ಟ ಕಾಪಾಡುವುದು ಗುತ್ತಿಗೆದಾರರ ಜವಾಬ್ದಾರಿ. ಗ್ರಾಮಸ್ಥರು ಸಹ ಮೇಲ್ವಿಚಾರಣೆ ನಡೆಸಿ ಏನಾದರೂ ವ್ಯತ್ಯಾಸಗಳು ಕಂಡುಬಂದರೆ ಗಮನಕ್ಕೆ ತರಬೇಕೆಂದರು. ಪಕ್ಷದ ಮುಖಂಡರು ಹಾಗು ಗ್ರಾಮಸ್ಥರು ಹಾಜರಿದ್ದರು.

## ಬೆಳೆ ಹಾನಿ ಪ್ರದೇಶಕ್ಕೆ ಜಿಲ್ಲಾಧಿಕಾರಿ ಭೇಟಿ

• ಪ್ರಜೋದಯ ವರದಿ

**ಅರಕಲಗೂಡು:** ಭಾರೀ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಾಲ್ಲೂಕಿನ ಕಸಬಾ ಹೋಬಳಿಯ ಬಸವನಹಳ್ಳಿಗೆ ಭೇಟಿ ನೀಡಿದ ಅವರು, ರೈತ ನಾಗರಾಜು ಅವರ ಜಮೀನಿನಲ್ಲಿ ಬಾಳೆ ತೋಟ ಹಾನಿಗೊಳಗಾದುದನ್ನು ವೀಕ್ಷಿಸಿದರು. ಬಳಿಕ ರೈತರೊಂದಿಗೆ ಚರ್ಚಿಸಿ ನಷ್ಟದ ಅಂದಾಜು ಪಡೆದು, ಹಾನಿ ಕುರಿತು ಸಮಗ್ರ ವರದಿ ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ತಹಶೀಲ್ದಾರ್, ಕೃಷಿ ಹಾಗು ತೋಟಗಾರಿಕೆ



ಇಲಾಖೆಯ ಅಧಿಕಾರಿಗಳು, ಪಿಡಿಓಗಳೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು. ಈ ವೇಳೆ ಬೆಳೆ ಹಾನಿಯನ್ನು ವೀಕ್ಷಿಸಿದ ಜಿಲ್ಲಾಧಿಕಾರಿ, ರೈತರಿಂದ ನಷ್ಟದ ಕುರಿತು ಮಾಹಿತಿ ಪಡೆದುಕೊಂಡರು. ಸರ್ಕಾರಕ್ಕೆ ವರದಿ ಸಲ್ಲಿಸಿ ಪರಿಹಾರ ಒದಗಿಸುವುದಾಗಿ ಭರವಸೆ ನೀಡಿದರು.

### ಜಾತಿ, ಹಣದ ಪ್ರಭಾವದಿಂದ ಪ್ರಜಾಪ್ರಭುತ್ವ ದುರ್ಬಲ: ವೈ.ಎಸ್.ವಿ.ದತ್ತಾ

# ರಾಜಕೀಯ ಹದಗೆಡಲು ರಾಜಕಾರಣಿಗಳೇ ಕಾರಣ

• ಪ್ರಜೋದಯ ವರದಿ

**ಹಾಸನ:** ರಾಜಕೀಯ ವ್ಯವಸ್ಥೆ ಹದಗೆಡಲು ರಾಜಕಾರಣಿಗಳೇ ಕಾರಣ. ಜಾತಿ ಮತ್ತು ಹಣದ ಪ್ರಭಾವದಿಂದ ಪ್ರಜಾಪ್ರಭುತ್ವ ದುರ್ಬಲವಾಗಿದೆ ಎಂದು ಚಿಂತಕ, ಮಾಜಿ ಶಾಸಕ ವೈ.ಎಸ್.ವಿ. ದತ್ತಾ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿಯ ಸ್ಟಡಿ ವಿತ್ ಸೊಸೈಟಿ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ರಾಜಕೀಯ ನೋಟ ಮತ್ತು ಪತ್ರಿಕಾರಂಗ ವಿಷಯ ಕುರಿತು ಮಾತನಾಡಿದ ಅವರು, ಈ ವ್ಯವಸ್ಥೆಯನ್ನು ಸುಧಾರಣೆ ಮಾಡ ಬೇಕೆಂದರೆ ಚುನಾವಣಾ ವ್ಯವಸ್ಥೆ ಬದಲಾಗಬೇಕು. ಜಾತಿ, ಹಣದಿಂದ ಇಡೀ ವ್ಯವಸ್ಥೆ ಹದಗೆಟ್ಟಿದೆ. ಈ ಬಗ್ಗೆ ಮಾಧ್ಯಮಗಳಿಂದ ತಿದ್ದುವ ಕೆಲಸವಾಗಬೇಕು. ಜನಪರ ಚಳುವಳಿ ಗಳು ನಡೆಯಬೇಕೆಂದರು.

ನಮ್ಮ ಕಾಲಘಟ್ಟದ ರಾಜಕೀಯಕ್ಕೂ ಇಂದಿನ ರಾಜಕೀಯಕ್ಕೂ ಬಹಳ ವ್ಯತ್ಯಾಸವಿದೆ. ಕಾಲಕ್ರಮೇಣ ರಾಜಕೀಯದಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು, ಆ ಕಾಲದ ವೃತ್ತಿಪರತೆ ಮತ್ತು



ಮೌಲ್ಯಗಳನ್ನು ಕಾಪಾಡಿಕೊಳ್ಳುವುದು ಇಂದು ದೊಡ್ಡ ಸವಾಲಾಗಿದೆ. ನಾನು ರಾಜಕೀಯ ಪ್ರವೇಶಿಸಿ 50 ವರ್ಷಗಳಾಗಿವೆ. ನಮ್ಮ ಕಾಲದಲ್ಲಿ ನಾವು ಸಾಮಾಜಿಕ ಹೋರಾಟಗಳ ಮೂಲ ಕವೇ ರಾಜಕೀಯಕ್ಕೆ ಬಂದವರು. ಆ ಹೋರಾಟಗಳು ನಮ್ಮ ಚಿಂತನೆಗೆ ದಿಕ್ಕು ತೋರಿಸಿದವು, ಜನಪರ ರಾಜಕೀಯದ ಅಗತ್ಯವನ್ನು ಮನಗಾಣಿಸಿದವು ಎಂದರು.

ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಜಾರಿಗೊಳಿಸಿದ ಸಂದರ್ಭದಲ್ಲಿ ಮಾತನಾಡುವುದೇ ಕಷ್ಟವಾಗಿತ್ತು. ಪ್ರಜಾಪ್ರಭುತ್ವದ ಕತ್ತು ಹಿಸುಕುವ ವಾತಾವರಣ ನಿರ್ಮಾಣವಾಗಿತ್ತು. ಆ ಸಮಯದಲ್ಲಿ ಜೆ.ಪಿ.ನಾರಾಯಣ ಅವರ ನೇತೃತ್ವದಲ್ಲಿ ನಡೆದ ಹೋರಾಟಗಳ ಮೂಲಕವೇ ನಾವು ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿಟ್ಟೆವು. ಆ ಸಂದರ್ಭದಲ್ಲೇ ಉದಯವಾದ ಜನತಾ ಪಕ್ಷ ಕಾಂಗ್ರೆಸ್‌ಗೆ ಪರ್ಯಾಯವಾಗಿ ಕಾಣಿಸಿಕೊಂಡಿತ್ತು ಎಂದು ಹೇಳಿದರು.

> **ತಾತ್ವಿಕ ರಾಜಕೀಯ ಮತ್ತು ಚುನಾವಣಾ ರಾಜಕೀಯ ಇಂದಿನ ಕಾಲಘಟ್ಟದಲ್ಲಿ ಬಹಳವಾಗಿ ಬದಲಾಗಿದೆ. ಹಿಂದಿನಂತೆ ತತ್ವಾಧಾರಿತ ರಾಜಕಾರಣವನ್ನು ಕಟ್ಟುನಿಟ್ಟಾಗಿ ಅನುಸರಿಸುವುದು ಇಂದಿನ ಪರಿಸ್ಥಿತಿಯಲ್ಲಿ ಸುಲಭವಲ್ಲ. ಅಂಥಹ ತಾತ್ವಿಕ ರಾಜಕೀಯವನ್ನು ಕಟ್ಟುನಿಟ್ಟಾಗಿ ಅನುಸರಿಸಿದರೆ, ಸಾರ್ವಜನಿಕ ರಾಜಕೀಯದಿಂದ ದೂರವಾಗಬೇಕಾಗುತ್ತದೆ.**
> **- ವೈ.ಎಸ್.ವಿ.ದತ್ತಾ, ಮಾಜಿ ಶಾಸಕ**

ದೇಶದ ಪ್ರಜಾಪ್ರಭುತ್ವವನ್ನು ರಕ್ಷಿಸುವಲ್ಲಿ ಪತ್ರಿಕಾ ರಂಗದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳಿಗಿಂತಲೂ ಪತ್ರಿಕಾರಂಗ ಜನತೆಯ ಧ್ವನಿಯಾಗಿ ಕಾರ್ಯನಿರ್ವಹಿಸಬೇಕು. ಪತ್ರಿಕೋದ್ಯಮ ಪ್ರಜಾಪ್ರಭುತ್ವದ ಕಣ್ಣು, ಕಿವಿ, ಬಾಯಿ ಆಗಿರಬೇಕು. ಪತ್ರಿಕೋದ್ಯಮ ಎನ್ನುವುದಕ್ಕಿಂತ ಪತ್ರಿಕಾರಂಗ ಎಂಬುದೇ ಸೂಕ್ತವೆಂದರು.

» ಮೂರನೇ ಪುಟದಲ್ಲಿ

# ವಿಜ್ಞಾನಿಗಳು ದೃಢೀಕರಿಸಿದ ಬಿತ್ತನೆ ಜೋಳ ರೈತರಿಗೆ


## ಮಂಡ್ಯ ಕೃಷಿ ವಿಶ್ವವಿದ್ಯಾಲಯ ಪರೀಕ್ಷೆ | ಬಿಳಿಸುಳಿ ರೋಗ ತಡೆಗೆ ಕ್ರಮ

• ಪ್ರಜೋದಯ ವರದಿ

**ಹಾಸನ:** ಜೋಳ ಬೆಳೆಯಲ್ಲಿ ಬಿಳಿಸುಳಿ ರೋಗ ಬಾಧೆಯನ್ನು ತಡೆಗಟ್ಟಲು ಮಂಡ್ಯ ಕೃಷಿ ವಿಶ್ವ ವಿದ್ಯಾಲಯ ಪರೀಕ್ಷೆಗೆ ಒಳಪಡಿಸಿದ, ಗುಣಮಟ್ಟದ ಹಾಗು ವಿಜ್ಞಾನಿಗಳು ದೃಢಿಕರಿಸಿದ ಬಿತ್ತನೆ ಬೀಜವನ್ನು ರೈತರಿಗೆ ವಿತರಣೆ ಮಾಡಲು ಕೃಷಿ ಇಲಾಖೆ ಮುಂದಾಗಿದೆ.

ಜಿಲ್ಲೆಯಲ್ಲಿ ಕಳೆದ ಸಾಲಿನ ಮುಂಗಾರುಹಂಗಾಮಿನಲ್ಲಿ ಹವಮಾನ ವೈಪರೀತ್ಯದಿಂದಾಗಿ ಹೈಬ್ರಿಡ್ ಮುಸುಕಿನ ಜೋಳ ಬೆಳೆಯಲ್ಲಿ ಬಿಳಿಸುಳಿ ರೋಗ ಬಾಧೆಯು ಕಂಡುಬಂದ ಪರಿಣಾಮ ರೈತರಿಗೆ ಆರ್ಥಿಕ ನಷ್ಟ ಅನುಭವಿಸಿದ್ದರು. ಹೀಗಾಗಿ 2026-27ನೇ ಸಾಲಿನ ಮುಂಗಾರು ಹಂಗಾಮಿಗೆ ಅಗತ್ಯ ಪ್ರಮಾಣದ ಉತ್ತಮ ಗುಣಮಟ್ಟದ ಮುಸುಕಿನ ಜೋಳ ಬಿತ್ತನೆ ಬೀಜವನ್ನು ರೈತರಿಗೆ ವಿತರಿಸಲು ಮುನ್ನೆಚರಿಕೆ ಕ್ರಮವಾಗಿ ವಿತರಿಸಲು ಮುಂದಾಗಿದೆ.

ಅದಕ್ಕಾಗಿ ಜಿಲ್ಲಾ ಸಲಹ ಸಮಿತಿಯ ತೀರ್ಮಾನದಂತೆ 2026ರ ಮುಂಗಾರು ಹಂಗಾಮಿಗೆ ಮಂಡ್ಯ ಕೃಷಿ ವಿಶ್ವ ವಿದ್ಯಾನಿಲಯ ವತಿಯಿಂದ ಬಿತ್ತನೆ ಬೀಜವನ್ನು ಪರೀಕ್ಷೆಗೆ ಒಳಪಡಿಸಲಾ ಗಿದ್ದು, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಿತ್ತನೆ ಬೀಜದ ಲಾಟ್ ಸಂಖ್ಯೆಯನ್ನು ಗುರುತಿಸಿ ಅಂತಹ ಬಿತ್ತನೆ ಬೀಜವನ್ನು ಜಿಲ್ಲೆಯ ಮಾರಾಟ ಗಾರರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು



ಜಂಟಿ ಕೃಷಿ ನಿರ್ದೇಶಕ ಪಿ.ರಮೇಶ್ ಕುಮಾರ್ ಅವರು ತಿಳಿಸಿದ್ದಾರೆ.

ಇಲ್ಲಿಯವರೆಗೆ 29 ವಿವಿಧ ಬೀಜೋತ್ಪಾದನಾ ಸಂಸ್ಥೆಗಳ ವಿವಿಧ ತಳಿಗಳ 291 ಲಾಟ್‌ಗಳ ಬಿತ್ತನೆ ಬೀಜಗಳನ್ನು ಪರೀಕ್ಷೆಗೆ ಒಳಪಡಿಸಿ, ಉತ್ತಮ ಎಂದು ದೃಢಿಕರಿಸಿದ ಲಾಟ್‌ಗಳ ಬಿತ್ತನೆ ಬೀಜವನ್ನು ಮಾತ್ರ ಜಿಲ್ಲೆಯ ಬಿತ್ತನೆ ಬೀಜ ಮಾರಾಟಗಾರರು ದಾಸ್ತಾನು, ವಿತರಣೆ, ಮಾರಾಟ ಮಾಡಲು ಕಟ್ಟುನಿಟ್ಟಿನ ನಿರ್ದೇಶನವನ್ನು ನೀಡಲಾಗಿದೆ.

**ಬೀಜೋಪಚಾರಕ್ಕೆ ರೈತರಿಗೆ ಸಲಹೆ**

ರೈತರು ಮೇವಿನ ಉದ್ದೇಶಕ್ಕಾಗಿ ಬಿತ್ತನೆಗೆ ಬಳಸುವ ಆಫ್ರಿಕನ್ ಟಾಲ್ ಹಾಗು ಇತರೆ ತಳಿಯ ಜೋಳದ ಬಿತ್ತನೆ ಬೀಜಗಳು ಬೀಜೋಪಚಾರ ಮಾಡದೇ ಇರುವುದರಿಂದ ಅಂತಹ ಬಿತ್ತನೆ ಪ್ರದೇಶದಲ್ಲಿ ಬಿಳಿಸುಳಿ ರೋಗಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚಾಗಿದೆ. ಅಲ್ಲಿಂದ ಇತರೆ ಪ್ರದೇಶ ಅಂದರೆ ಬೀಜೋಪಚಾರ ಮಾಡಿದ ಬಿತ್ತನೆ ಪ್ರದೇಶಕ್ಕೂ ರೋಗಕಾರಕ ಜೀವಿಗಳು ಮೂಲ ಗಾಳಿ, ನೀರು ,ಮಣ್ಣಿನ ಮೂಲಕ ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಆದ್ದರಿಂದ ಬಿತ್ತನೆ ಬೀಜವನ್ನು ವಿಜ್ಞಾನಿಗಳು ಶಿಫಾರಸ್ಸು ಮಾಡಿರುವ ಮೆಟಲಾಕ್ಸಿಲ್ ಶೇ.4 + ಮ್ಯಾಂಕೋಜೆಬ್ ಶೇ.64 ಡಬ್ಲ್ಯೂಪಿ 3 ಗ್ರಾಂ ಪ್ರತಿ ಕೆ.ಜಿ. ಬಿತ್ತನೆ ಬೀಜಕ್ಕೆ ಬೀಜೋಪಚಾರ ಮಾಡಿ ಬಿತ್ತನೆ ಮಾಡುವಂತೆ ಸಲಹೆಯನ್ನು ಜಂಟಿ ಕೃಷಿ ನಿರ್ದೇಶಕ ಪಿ. ರಮೇಶ್‌ಕುಮಾರ್ ತಿಳಿಸಿದ್ದಾರೆ.

**ಅಧಿಕೃತರಿಂದಲೇ ಖರೀದಿಸಲು ಸೂಚನೆ**

ರೈತರು ಸಹ ಬಿತ್ತನೆ ಬೀಜವನ್ನು ಅಧಿಕೃತ ಬಿತ್ತನೆ ಬೀಜ ಮಾರಾಟ ಮಳಿಗೆಯಿಂದ ಖರೀದಿ ಸುವ ಸಮಯದಲ್ಲಿ ಖರೀದಿಸಿದ ಬಿತ್ತನೆ ಬೀಜದ ಕುರಿತು ಲಾಟ್ ಸಂಖ್ಯೆ ನಮೂದಿಸಿರುವ ರಶೀದಿಯನ್ನು ಕಡ್ಡಾಯವಾಗಿ ಕೇಳಿ ಪಡೆಯಲು ಹಾಗೂ ಸದರಿ ರಶೀದಿಯನ್ನು ಬೆಳೆಯ ಕಡೆಯ ಹಂತದವರೆಗೆ ಸುರಕ್ಷಿತವಾಗಿ ಇಟ್ಟುಕೊಳ್ಳಲು ತಿಳಿಸಲಾಗಿದೆ.

## ಚಿಕಿತ್ಸೆ ಫಲಿಸದೆ ಮಹಿಳೆ ಸಾವು: ಕೊಲೆ ಶಂಕೆ

**ಸಕಲೇಶಪುರ:** ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಮಹಿಳೆ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದು ಕೊಲೆ ಶಂಕೆ ವ್ಯಕ್ತವಾಗಿದೆ.

ಹೆತ್ತೂರು ಹೋಬಳಿ ಅತ್ತಿಹಳ್ಳಿ ಗ್ರಾಮದ ರಮ್ಯ (35) ಮೃತರು. ರಮ್ಯ ಅವರ ಪತಿ ಉಮೇಶ್ ಎರಡು ವರ್ಷಗಳ ಹಿಂದೆ ಅನಾರೋಗ್ಯದಿಂದ ಮೃತಪಟ್ಟಿದ್ದಾರೆ. ಆ ಬಳಿಕ ರಮ್ಯ ಬೆಂಗಳೂರಿನಲ್ಲಿ ಕೆಲಸ ಮಾಡಿ ಕೊಂಡಿದ್ದರು. ಏ.24 ರಂದು ಅತ್ತೆ ಕಾಳಮ್ಮ ನಿಧನರಾದ ಹಿನ್ನಲೆ ಯಲ್ಲಿ ಅಂತ್ಯ ಸಂಸ್ಕಾರಕ್ಕಾಗಿ ಬಂದಿದ್ದರು. ಅಂತಿಮ ವಿಧಿ ವಿಧಾನ ಮುಗಿದ ಬಳಿಕ ರಮ್ಯ ಮನೆಯಲ್ಲೇ ಇದ್ದರು. ಮಾರನೇ ದಿನ ಬೆಳಿಗ್ಗೆ ಹೊಟ್ಟೆ ನೋವು ಎಂದು ಹೇಳಿದ ತಕ್ಷಣ ಪಟ್ಟಣದ ಕ್ರಾಫರ್ಡ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಬಳಿಕ ಹಿಮ್ಸ್‌ಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.


**ಚಂದ್ರ ಎಂಬಾತನಿಂದ ಕೊಲೆ ಶಂಕೆ:** ಮೃತ ರಮ್ಯ ಹಾಗು ಅತ್ತಿಹಳ್ಳಿಯ ಚಂದ್ರ ಎಂಬಾತನ ಜೊತೆಗೆ ಸಂಬಂಧವಿತ್ತು ಎಂದು ತಿಳಿದುಬಂದಿದೆ. ಏ.29 ರಂದು ಚಂದ್ರನು ಕೈ ಗಳಿಂದ ಹೊಡೆದು ಗಂಭೀರ ಗಾಯಗೊಳಿಸಿದ್ದ. ಎದೆ, ಹೊಟ್ಟೆ ಭಾಗಕ್ಕೆ ಜೋರಾಗಿ ಒದ್ದಿದ್ದರಿಂದ ರಮ್ಯ ಅಸ್ವಸ್ಥರಾಗಿದ್ದರು ಎನ್ನಲಾಗಿದೆ. ಆಸ್ಪತ್ರೆ ಯಲ್ಲಿ ರಮ್ಯ ಅವರು ಹೇಳಿಕೆ ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿ ಚಂದ್ರ ಎಂಬಾತನನ್ನು ವಶಕ್ಕೆ ಪಡೆದಿದ್ದಾರೆ. ಯಸಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಎಲ್ಲೆಲ್ಲೂ ಎಲ್ ನಿನೋ ತಂದಿಟ್ಟಿರುವ ಎಡವಟ್ಟು!

**ನಮ್ಮ ಹಳ್ಳಿಯಲ್ಲಿ ವಾಸವಿರುವ ಕೃಷಿಕರೊಬ್ಬರು ಇತ್ತೀಚೆಗೆ ಮಾತುಕತೆಗೆ ಸಿಕ್ಕಿದ್ದರು; ಪ್ರತಿದಿನ ದಿನಪತ್ರಿಕೆಯನ್ನೋದುವ, ಸಾಕಷ್ಟು ತಿಳಿವಳಿಕೆ ಇರುವ ಅವರು, ಈ ವರ್ಷದ ಮಳೆಯ ಕುರಿತು ತುಸು ಕಳವಳ ವ್ಯಕ್ತಪಡಿಸಿದರು. ಯಾಕೆ? ಎಂದೆ. ಈ ವರ್ಷ ಎಲ್ ನಿನೋ ಪ್ರಭಾವ ಉಂಟು ಎಂದು ಟಿವಿಯಲ್ಲಿ ಹೇಳುತ್ತಿದ್ದಾರಲ್ಲ, ಅದರಿಂದ, ಮಳೆ ಏರುಪೇರಾಗುತ್ತದೆಂತೆ.**

ನಮ್ಮ ಹಳ್ಳಿಯಲ್ಲಿ ವಾಸವಿರುವ ಕೃಷಿಕರೊಬ್ಬರು ಇತ್ತೀಚೆಗೆ ಮಾತುಕತೆಗೆ ಸಿಕ್ಕಿದ್ದರು; ಪ್ರತಿದಿನ ದಿನಪತ್ರಿಕೆಯನ್ನೋದುವ, ಸಾಕಷ್ಟು ತಿಳಿವಳಿಕೆ ಇರುವ ಅವರು, ಈ ವರ್ಷದ ಮಳೆಯ ಕುರಿತು ತುಸು ಕಳವಳ ವ್ಯಕ್ತಪಡಿಸಿದರು. ಯಾಕೆ? ಎಂದೆ. ಈ ವರ್ಷ ಎಲ್ ನಿನೋ ಪ್ರಭಾವ ಉಂಟು ಎಂದು ಟಿವಿಯಲ್ಲಿ ಹೇಳುತ್ತಿದ್ದಾರಲ್ಲ, ಅದರಿಂದ, ಮಳೆ ಏರುಪೇರಾಗುತ್ತದೆಂತೆ.

ಸೆಖೆ ಜಾಸ್ತಿಯಾಗುತ್ತದಂತೆ; ನಮ್ಮ ಕೃಷಿಕೆಲಸ ಹೇಗಾಗುತ್ತದೋ ಎಂಬ ಚಿಂತೆ ಮಾರಾಯ್ರೆ ಎಂದು ಅವರು ಹೇಳಿದಾಗ, ತುಸು ಅಚ್ಚರಿಯಾಯಿತು; ಈಚಿನ ದಿನಗಳಲ್ಲಿ ಹಳ್ಳಿಯಲ್ಲಿರುವವರು ಸಹ ಎಲ್‌ನಿನೋ ಕುರಿತು ತಲೆಕೆಡಿಸಿಕೊಂಡು, ಆ ಕುರಿತು ಚರ್ಚಿಸುತ್ತಿದ್ದಾರಲ್ಲ ಎಂಬ ಅಚ್ಚರಿ ಅದು.




ಭಾಗಗಳಲ್ಲಿರುವ

ಎಲ್‌ನಿನೋ ಎಂದರೇನು? ಕಳೆದ ಕೆಲವು ತಿಂಗಳುಗಳಿಂದ ನಮ್ಮ ಮಾಧ್ಯಮಗಳು ಆಗಾಗ ಎಲ್ ನಿನೋ ಪರಿಣಾಮದ ಕುರಿತು ವರದಿಗಳನ್ನು ಪ್ರಸಾರ ಮಾಡುತ್ತಿವೆ. ಇದು ಹವಾ ಮಾನಕ್ಕೆ ಸಂಬಂಧಿಸಿದ ವಿದ್ಯಮಾನ; ಹಾಗೆ ನೋಡಿದರೆ, ಇಡೀ ಜಗತ್ತಿನ ಹವಾಮಾನವನ್ನು ಮತ್ತು ಆ ಮೂಲಕ ಕೃಷಿಯನ್ನು, ಜನರ ಬದುಕನ್ನು ಏರುಪೇರು ಮಾಡುವ ತಾಕತ್ತು ಹೊಂದಿರುವ ವಿದ್ಯಮಾನವಿದು.

ನಮ್ಮ ದೇಶದಲ್ಲಿ ಕೆಲವು ದಶಕಗಳ ಹಿಂದೆ, ಕಳೆದ ಶತಮಾನದಲ್ಲಿ ಸಹ, ಬರಗಾಲ ಒಕ್ಕರಿಸಿದ್ದು, ಅದರಿಂದಾಗಿ, ದೇಶದಲ್ಲಿ ಆಹಾರದ ಕೊರತೆಯುಂಟಾಗಿ, ತೀವ್ರ ಸಂಕಷ್ಟ ಎದುರಾಗಿದ್ದನ್ನು ಗಮನಿಸಿದ್ದೇವೆ; ಅಂತಹ ಕೆಲವು ಬರಗಾಲಗಳು ಎಲ್‌ನಿನೋ ಅಥವಾ ಅಂತಹದ್ದೇ ಇತರ ವಾತಾವರಣದ ಏರುಪೇರು ಎಂದೇ ಹೇಳಬಹುದು.

ಈಚಿನ ದಶಕಗಳಲ್ಲಿ, ಅದರಲ್ಲೂ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿದ ನಂತರ, ಬರಗಾಲಗಳು ಆಗಾಗ ಬಂದಿದ್ದರೂ, ಸರಕಾರ ಮತ್ತು ಪ್ರಭುತ್ವವು ಜನರ ನೆರವಿಗೆ ಒದಗಿ, ಬರಗಾಲದ ತೀವ್ರತೆಯು ಜನಸಾಮಾನ್ಯರನ್ನು ಹೆಚ್ಚು ಕಾಡದಂತೆ ನೋಡಿಕೊಂಡಿದ್ದರಿಂದಾಗಿ, ಅಷ್ಟರ ಮಟ್ಟಿಗೆ ಕಷ್ಟಗಳು ಕಡಿಮೆಯಾದವು; ಆದರೂ, ಈ ವರ್ಷದ ಎಲ್ ನಿನೋ ಸಾಕಷ್ಟು ತೀವ್ರವಾಗಿರುತ್ತದೆ ಎಂದು ಹವಾಮಾನ ತಜ್ಞರು ಅದಾಗಲೇ ಎಚ್ಚರಿಸಿದ್ದಾರೆ.

ಎಲ್‌ನಿನೋ ಎಂಬುದು ಸ್ಪಾನಿಷ್ ಪದ; ಪೆರು ಮತ್ತು ಈಕ್ವೆಡಾರ್ ದೇಶಗಳಲ್ಲಿ, ಹವಾಮಾನದ ಏರುಪೇರನ್ನು ವರ್ಣಿಸಲು ಅಲ್ಲಿನ ಜನ ಸಾಮಾನ್ಯರು ಬಹು ಹಿಂದಿನಿಂದಲೂ ಬಳಸುತ್ತಿದ್ದ ಪದ ಅದು; ಅಲ್ಲಿ ಚಳಿಗಾಲದಲ್ಲಿ, ಕ್ರಿಸ್ಮಸ್ ಸಮಯದಲ್ಲಿ ಒಂದೊಂದು ವರ್ಷ ಕಾಣಿಸುತ್ತಿದ್ದ ಹೆಚ್ಚಿನ ತಾಪಮಾನವನ್ನು, ಹವಾಮಾನದ ಏರು ಪೇರನ್ನು ಗುರುತಿಸಲು ಆ ಪದವನ್ನು ಬಳಸುತ್ತಿದ್ದರು.

ಅದೇ ಪದವು ಈಗ ಜಗತ್ತಿನ ತಾಪಮಾನದ ಏರುಪೇರನ್ನು ಪ್ರತಿನಿಧಿಸುವ ವಿದ್ಯಮಾನ ಎನಿಸಿದೆ. ವಿಶೇಷವೆಂದರೆ, ಅಮೆರಿಕ ಖಂಡಗಳನ್ನು ಪೂರ್ವದಲ್ಲಿ ಆವರಿಸಿರುವ ಶಾಂತ ಮಹಾಸಾಗರದ ಉಷ್ಣವಲಯದ ಭಾಗಗಳಲ್ಲಿ, ಸಮುದ್ರದ ಮೇಲ್ಮೈ ತಾಪಮಾನವು ಅತಿ ಹೆಚ್ಚು ಕಂಡುಬರುವುದನ್ನು ಎಲ್ ನಿನೋ ಎಂದು ಕರೆದಿದ್ದಾರೆ.

ಅಮೆರಿಕ ಖಂಡಗಳ ಬಳಿ ಕಾಣಬರುವ ಈ ಹವಾಮಾನ ವೈಪರಿತ್ಯವು, ಇಡೀ ಜಗತ್ತನ್ನು, ಅದರಲ್ಲೂ ಮುಖ್ಯವಾಗಿ ಏಷ್ಯಾದ ಹಲವು ದೇಶಗಳನ್ನು ಮತ್ತು ನಮ್ಮ ದೇಶವನ್ನು ಕಾಡುವುದು ವಿಶೇಷ. ಎಲ್ಲಿಯ ಪೆರು, ಎಲ್ಲಿಯ ಈಕ್ವೆಡಾರ್, ಎಲ್ಲಿಯ ಕರ್ನಾಟಕ!

ಆದರೇನು ಮಾಡುವುದು, ಎಲ್-ನೀನೋ ವ್ಯತ್ಯಯವು ಈ ವರ್ಷ ನಮ್ಮ ರಾಜ್ಯದ ಕೃಷಿಕರನ್ನು, ಅದರಲ್ಲೂ ಮುಖ್ಯವಾಗಿ, ನೀರಾವರಿ ವ್ಯವಸ್ಥೆ ಹೆಚ್ಚು ಲಭ್ಯವಿಲ್ಲದ ಉತ್ತರ ಮತ್ತು ಮಧ್ಯ ಕರ್ನಾಟಕದ ಕೃಷಿಕರನ್ನು ಕಾಡುತ್ತದೆ ಎಂದೇ ತಜ್ಞರು ಅದಾಗಲೇ ಹೇಳಿದ್ದಾರೆ. ಜತೆಗೆ, ಮಳೆ ಕಡಿಮೆಯಾಗುವುದರಿಂದಾಗಿ, ನಮ್ಮ ರಾಜ್ಯದ ಇತರ ಭಾಗಗಳಲ್ಲಿರುವ ಅಣೆಕಟ್ಟುಗಳಿಗೆ ನೀರು ಸಾಕಷ್ಟು ಬರದೇ ಇರುವುದರಿಂದ, ವಿದ್ಯುತ್ ಸಮಸ್ಯೆ ಮತ್ತು ನೀರಾವರಿಯನ್ನು ಅವಲಂಬಿಸಿದ ಬೆಳೆಗಳಿಗೆ ನೀರು ದೊರಕದೇ ಉಂಟಾಗುವ ಸಮಸ್ಯೆ ಮೊದಲಾದವುಗಳನ್ನು, 2026-27ರಲ್ಲಿ ಕಾಣಬೇಕಾದೀತು ಎಂದೇ ಎಚ್ಚರಿಸಿದ್ದಾರೆ.

ಮತ್ತೂ ಗಮನಿಸಬೇಕಾದ ವಿಚಾರವೆಂದರೆ, 2026ರ ಎಲ್ ನಿನೋ ಹೆಚ್ಚು ತೀವ್ರವಾಗಿರುವುದಂತೆ. ಎಲ್‌ನಿನೋ ಎಂದರೆ ಬರಗಾಲದ ಛಾಯೆ ಎಂದು ಹೇಳಿದರೆ ತಪ್ಪಿಲ್ಲ; ಏಕೆಂದರೆ, ಎಲ್‌ನಿನೋ ಪರಿಣಾಮ ಇರುವ ವರ್ಷಗಳಲ್ಲಿ, ಸಾಮಾನ್ಯವಾಗಿ ಏಷ್ಯಾ ಮತ್ತು ಆಸ್ಟ್ರೇಲಿಯಾದ ವಿವಿಧ ಭಾಗಗಳಲ್ಲಿ ಹೆಚ್ಚಿನ ಬಿಸಿಲು ಇರುತ್ತದೆ; ಮಳೆಯು ಕಡಿಯಾಗುತ್ತದೆ. ಈ ವರ್ಷದ ಎಲ್ನಿ ನೋ ತೀವ್ರವಾಗಿರುವುದರಿಂದ, 2026 ಮುಗಿಯುವುದರೊಳಗೆ, ಸಾಕಷ್ಟು ಕ್ಷೋಭೆ ಎದುರಾಗಲಿದ್ದು, ಮುಖ್ಯವಾಗಿ ಕೃಷಿಯನ್ನು ಅವಲಂಬಿಸಿರುವವರಿಗೆ ಬೇಗನೆ ನೇರ ಪರಿಣಾಮವನ್ನುಂಟುಮಾಡಬಲ್ಲದು.

ದೂರದ ಅಮೆರಿಕದ ಒಂದು ತೀರದಲ್ಲಿರುವ ಶಾಂತ ಸಾಗರದಲ್ಲಿನ ತಾಪಮಾನ ಹೆಚ್ಚಳವು, ನಮ್ಮಲ್ಲಿ ತೀವ್ರ ಬರಗಾಲ ಸೃಷ್ಟಿಸಿದರೂ, ಅಮೆರಿಕದ ಖಂಡಗಳಲ್ಲಿ ಮಾತ್ರ ಮಳೆ ಜಾಸ್ತಿಯಾಗಬಹುದಂತೆ!

ಆದರೆ, ಅದರಿಂದ, ನಾವು ಹೊಟ್ಟೆ ಉರಿ ಪಟ್ಟುಕೊಳ್ಳಬೇಕಿಲ್ಲ; ಏಕೆಂದರೆ, ಅಮೆರಿಕದ ಹಲವು ದೇಶಗಳಲ್ಲಿ ಅಧಿಕ ಮಳೆ ಎಂದರೆ, ಇನ್ನಷ್ಟು ಪ್ರಾಕೃತಿಕ ಸಮಸ್ಯೆಗಳೇ ಹೊರತು, ಹೆಚ್ಚಿನ ಲಾಭವಿರಲಾರದು. ಎಲ್‌ನಿನೋ ನೇರವಾಗಿ ಪರಿಣಾಮ ಬೀರುವುದು ಕೃಷಿ ಕ್ಷೇತ್ರದ ಮೇಲೆ; ಜತೆಗೆ, ಹಲವು ಕಡೆ ಕುಡಿಯುವ ನೀರಿನ ಲಭ್ಯತೆಯ ಮೇಲೂ ಪರಿಣಾಮ ಬೀರಬಲ್ಲದು.

ಮಳೆಯ ಕೊರತೆಯಿಂದಾಗಿ, ಆಹಾರ ಉತ್ಪಾದನೆ ಕಡಿಮೆಯಾಗಬಲ್ಲದು; ನೀರಾವರಿ ವ್ಯವಸ್ಥೆಯು ಏರುಪೇರಾದೀತು; ಉದಾಹರಣೆಗೆ ನೀರಾವರಿ ಬೆಳೆ ಬೆಳೆಯುವ ರೈತರು, ವರ್ಷಕ್ಕೆ ಎರಡು ಬೆಳೆ ಬೆಳೆಯುತ್ತಿದ್ದವರು, ಮುಂದಿನ ವರ್ಷ ಒಂದೇ ಬೆಳೆ ಬೆಳೆಯಬೇಕಾದ ಅನಿವಾರ್ಯ ಸ್ಥಿತಿ ಎದುರಾದೀತು.

ಇವೆಲ್ಲವುಗಳ ಒಟ್ಟು ಪರಿಣಾಮವಾಗಿ, ಜಾಗತಿಕ ಆಹಾರ ಸರಬರಾಜು ಮತ್ತು ಬೆಲೆಗಳಲ್ಲಿ ಅಸ್ಥಿರತೆ ಉಂಟಾಗಬಹುದು. ಈಗಾಗಲೇ, 2026ರ ಆರಂಭದ ತಿಂಗಳುಗಳಲ್ಲಿ, ಇರಾನ್ ಸುತ್ತಲೂ ಯುದ್ಧ ನಡೆಯುತ್ತಿರುವುರಿಂದಾಗಿ, ಕಚ್ಚಾ ತೈಲದ ಬೆಲೆ ಏರಿಕೆಯಾಗಿದ್ದು, ಇಡೀ ಜಗತ್ತಿನ ತೈಲ ಕ್ಷೇತ್ರವೇ ಸಣ್ಣ ಭೂಕಂಪವನ್ನು ಎದುರಿಸಿದಂತಾಗಿದೆ; ನಮ್ಮ ದೇಶದಲ್ಲಿ ಈ ತನಕ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚು ಏರಿಕೆ ಕಂಡಿಲ್ಲವಾದರೂ, ಯುದ್ಧದ ಸ್ಥಿತಿ ಮುಂದುವರಿದರೆ, ಹೊರ್ಮುಜ್ ಜಲಸಂಧಿಯಲ್ಲಿನ ದಿಗ್ಬಂಧನ ಮತ್ತು ಕಲ್ಲೋಳಗಳು ಮುಂದುವರಿದರೆ, ಎಲ್ಲ ತೈಲೋತ್ಪನ್ನಗಳ ಬೆಲೆ ನಮ್ಮಲ್ಲೂ ಏರುವುದು ಖಚಿತ.

2026ರ ಆರಂಭದಲ್ಲಿ ಹೀಗಿರುವಾಗ, ಈ ವರ್ಷದ ಮುಂದಿನ ತಿಂಗಳುಗಳಲ್ಲಿ, ಎಲ್‌ನಿನೋ ಪರಿಣಾಮದಿಂದ, ಮಳೆ ಕಡಿಯಾದರೆ, ಆಹಾರ ಪದಾರ್ಥಗಳ ಉತ್ಪನ್ನವೂ ಕುಂಠಿತಗೊಂಡು, ಒಟ್ಟಾರೆ ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳಬಹುದು. ನಮ್ಮ ದೇಶಕ್ಕೆ ಮಾನ್ಸೂನ್ ಮಾರುತಗಳು ತರುವ ಮಳೆ ಅತಿ ಅಮೂಲ್ಯ; ಬಹುಪಾಲು ರಾಜ್ಯಗಳು ಮಾನ್ಸೂನ್ ಮಳೆಯನ್ನೇ ಅವಲಂಬಿಸಿ, ಕೃಷಿ ಚಟುವಟಿಕೆ ನಡೆಸುತ್ತಿವೆ; ಮಾನ್ಸೂನ್ ಮಾರುತ ತಂದು ಮಳೆಯು, ಅಣೆಕಟ್ಟುಗಳಲ್ಲಿ ಸಂಗ್ರಹಗೊಂಡು ಕೃಷಿ ಮತ್ತು ವಿದ್ಯುತ್ ಉತ್ಪಾದನೆಗೆ ಒದಗಿ ಬರುತ್ತದೆ.

ಆದ್ದರಿಂದ, ಮಾನ್ಸೂನ್ ಏರು ಪೇರಾದರೆ, ಕಷ್ಟ ಖಚಿತ; ಈ ವರ್ಷ, ಎಲ್-ನೀನೋ ವಿದ್ಯಮಾನವು, ಈ ಮಳೆಯ ಮೇಲೆ ತೀವ್ರ ಮತ್ತು ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದಿದ್ದಾರೆ ತಜ್ಞರು. 2026ರಲ್ಲಿ ಭಾರತದಲ್ಲಿ ಮಳೆ ಸರಾಸರಿಗಿಂತ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ತಜ್ಞರು ಅದಾಗಲೇ ಹೇಳಿದ್ದಾರೆ.

ವಾಡಿಕೆಗಿಂತ ಶೇ.8ರಿಂದ 10ರಷ್ಟು ಕಡಿಮೆ ಮಳೆಯಾಗುವ ಸಾಧ್ಯತೆ ಇದೆ; ಇದು ಗಮನಾರ್ಹ ಇಳಿಕೆ ಎಂಬುದರಲ್ಲಿ ಎರಡು ಮಾತಿಲ್ಲ. ಆದ್ದರಿಂದಲೇ ಎಲ್ ನಿನೋ ಎದುರಾದ ವರ್ಷಗಳೆಂದರೆ, ಎಲ್ಲರಿಗೂ ತುಸು ನಡುಕ, ಹೆಚ್ಚು ಸಂಕಷ್ಟ. ಎಲ್ ನಿನೋದಿಂದಾಗಿ, ಮಳೆ ಕಡಿಮೆಯಾಗುತ್ತದೆ, ಬರುವ ಮಳೆಯು ಅಕಾಲದಲ್ಲಿ ಸುರಿದೀತು ಅಥವಾ ಎಲ್ಲೆಲ್ಲೋ ಸುರಿದೀತು (ಅಂದರೆ, ಕಡಿಮೆ ಮಳೆಯಾಗುವ ಪ್ರದೇಶದಲ್ಲಿ ಹೆಚ್ಚು ಮಳೆ ಯಾದೀತು), ಬರಗಾಲದ ಅವಧಿ ದೀರ್ಘವೂ ಆಗಿರಬಹುದು, ಆ ಮೂಲಕ ಒಟ್ಟಾರೆ ಕೃಷಿ ಕ್ಷೇತ್ರಕ್ಕೆ ತೀವ್ರ ಹಾನಿ, ಸಂಕಷ್ಟ.

ಎಲ್‌ನಿನೋದಿಂದ ಎದುರಾಗುವ ಇನ್ನೊಂದು ಸಂಕಷ್ಟ ಎಂದರೆ, ಹೀಟ್ ವೇವ್! ಈ ವರ್ಷ ಬಿಸಿಲಿನ ತಾಪ ಅಧಿಕವಿರುತ್ತದೆ ಎಂದು ನಮ್ಮ ದೇಶದ ಹವಾಮಾನ ತಜ್ಞರು ಅದಾಗಲೇ ಎಚ್ಚರಿಸಿದ್ದಾರೆ; ಅವರ ಭವಿಷ್ಯ ನಿಜವಾಗಿದೆಯೋ ಎಂಬಂತೆ, ಬೆಂಗಳೂರಿನಂತಹ ತಂಪು ನಗರಗಳಲ್ಲಿ ಈ ವರ್ಷ ಏಪ್ರಿಲ್‌ನಲ್ಲಿ 37 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿ, ಉದ್ಯಾನಗಳ ನಗರವು, ಬಿಸಿಲಿನ ನಗರ ಎಂದು ಉದ್ಗಾರಗಳನ್ನು ಹೊರಡಿಸಿತು!


ಬೆಂಗಳೂರಿನ ಕಥೆ ಇಷ್ಟಾದರೆ, ನಮ್ಮದೇ ರಾಜ್ಯದ ವಿಜಯಪುರ, ಶಿವಮೊಗ್ಗ, ಮಂಗಳೂರು ಮೊದಲಾದ ಕಡೆ 40 ಡಿಗ್ರಿ ತಾಪಮಾನ ದಾಖಲಾಗಿ, ಜನಜೀವನವೇ ನಲುಗಿತು; ಹೆಚ್ಚು ಹೆಚ್ಚು ಜನ ಫೋನ್, ಫ್ರಿಜ್, ಏರ್ ಕಂಡಿಷನರ್‌ಗಳನ್ನು ಖರೀದಿಸಿ, ಹಗಲು ರಾತ್ರಿ ಅವುಗಳನ್ನು ಓಡಿಸಿದ್ದರಿಂದ, ವಿದ್ಯುತ್ ಬಳಕೆಯೂ ದಾಖಲೆ ಮಟ್ಟಕ್ಕೆ ಏರಿತು! ಅವುಗಳಿಂದ ಹೊರಬರುವ ಬಿಸಿಯು, ಸುತ್ತಲಿನ ಉಷ್ಣತೆಯನ್ನು ಇನ್ನಷ್ಟು ಹೆಚ್ಚಿಸುತ್ತಿದೆ! ಈ ವರ್ಷದ ಎಲ್‌ನಿನೋ ಪ್ರಭಾವವೋ ಎಂಬಂತೆ, ಇದೇ ಮೊದಲ ಬಾರಿ, ಬೆಂಗಳೂರಿನಂತಹ ತಂಪು ನಗರಗಳಲ್ಲಿ ಹೀಟ್‌ವೇವ್ ಬರಬಹುದು ಎಂದು ಮುನ್ಸೂಚನೆ ನೀಡಲಾಗಿದೆ.

ನಮ್ಮ ದೇಶದಲ್ಲಿ ಒಡಿಶಾ, ಆಂಧ್ರಪ್ರದೇಶ, ಉತ್ತರ ಪ್ರದೇಶದ ಕೆಲವು ಭಾಗಗಳು ಆಗಾಗ ಹೀಟ್ ವೇವ್ ಸಂಕಷ್ಟಕ್ಕೆ ಗುರಿಯಾಗುವುದು ವರದಿಯಾಗುತ್ತಲೇ ಇರುತ್ತದೆ; ಈ ವರ್ಷ, ಎಲ್ ನಿನೋ ಪ್ರಭಾವದಿಂದಾಗಿ, ಅಲ್ಲೆಲ್ಲಾ, ಜತೆಗೆ, ದೇಶದ ಹಲವು ಭಾಗಗಳಲ್ಲಿ ಹೀಟ್ ವೇವ್ ತಾಪ ತೀವ್ರವಾಗಲಿದ್ದು, ಹಲವು ಜನರು ಪ್ರಾಣಹಾನಿಗೊಳಗಾಲೂಬಹುದು.

ಸರಿಯಪ್ಪ, ಎಲ್‌ನಿನೋದಿಂದಾಗಿ, ಬರಗಾಲ ಬರುತ್ತದೆ, ಅದಕ್ಕೆ ನಾವೇನು ಮಾಡಬೇಕು, ಯಾವ ರೀತಿಯ ಸಿದ್ಧತೆ ಮಾಡಿಕೊಳ್ಳಬೇಕು? ಎಂದು ನೀವು ಪ್ರಶ್ನೆ ಮಾಡಬಹುದು. ಇದು ಬಹಳ ಮಹತ್ವದ ಪ್ರಶ್ನೆ. 2026ರಲ್ಲಿ ಎಲ್‌ನಿನೋ ಪರಿಣಾಮ ಉಂಟಾಗಿದ್ದು, ಅದು ನಮ್ಮ ದೇಶದ ಮತ್ತು ರಾಜ್ಯದ ಮೇಲೆ ತೀವ್ರ ಪರಿಣಾಮ ಉಂಟುಮಾಡುತ್ತದೆ ಎಂದು ಈಗಾಗಲೇ ಹವಾಮಾನ ತಜ್ಞರು ಹೇಳಿದ್ದಾರೆ, ಮಾತ್ರವಲ್ಲ ಎಚ್ಚರಿಸಿಯೂ ಇದ್ದಾರೆ. ಆದ್ದರಿಂದ ಎಲ್‌ನಿನೋ ಎದುರಿಸಲು ಸೂಕ್ತ ತಯಾರಿ ಮಾಡಿಕೊಳ್ಳಲು ನಮಗೀಗ ಸಾಕಷ್ಟು ಕಾಲಾವಕಾಶ ಇದೆ ಎಂದೇ ಹೇಳಬಹುದು.

ಸರಳವಾದ ಭಾಷೆಯಲ್ಲಿ ಹೇಳುವುದಾದರೆ, ಎಲ್‌ನಿನೋ ವಿದ್ಯಮಾನ ಉಂಟಾದ ವರ್ಷಗಳಲ್ಲಿ ಮಳೆ ಕಡಿಮೆಯಾಗುತ್ತದೆ, ಬಿಸಿಲು ಅಧಿಕವಾದೀತು ಮತ್ತು ಮಳೆ ಬಂದಾಗ ಸಹಜವಾಗಿ ಬರದೇ, ಎಲ್ಲೆಲ್ಲೋ, ಹೇಗ್ಹೇಗೋ ಬರುತ್ತದೆ. ಇಂತಹ ವಿಚಾರಗಳನ್ನು ಟಾರ್ಗೆಟ್ ಮಾಡಿಕೊಂಡು, ತಕ್ಕ ಸಿದ್ಧತೆ ಮಾಡಿಕೊಳ್ಳುವುದು ಸೂಕ್ತ.

ಎಲ್‌ನಿನೋ ಎದುರಿಸಲು ವೈಯಕ್ತಿಕ ಮಟ್ಟದ ಸಿದ್ಧತೆಯ ಜತೆಗೆ, ಪ್ರಭುತ್ವದ ವಿವಿಧ ಇಲಾಖೆಗಳು ಸಮನ್ವಯದೊಂದಿಗೆ ಕೆಲಸ ಮಾಡಿ, ಜನರಿಗೆ ಮಾರ್ಗದರ್ಶನ ನೀಡಬೇಕು ಮತ್ತು ಲಭ್ಯವಿರುವ ನೀರನ್ನು ವೈಜ್ಞಾನಿಕವಾಗಿ ವಿತರಿಸಿ, ಕೃಷಿಕರಿಗೆ ಮತ್ತು ಜನಸಾಮಾನ್ಯರಿಗೆ ಹೆಚ್ಚು ತೊಂದರೆಯಾಗದಂತೆ ನೋಡಕೊಳ್ಳಬೇಕು ಎನ್ನುತ್ತಾರೆ ತಜ್ಞರು.ಇಂದಿನ ವ್ಯವಸ್ಥೆಯಲ್ಲಿ ಎಲ್ ನಿನೋದಂತಹ ವಾತಾವರಣ ವ್ಯತ್ಯಯವನ್ನು ಎದುರಿಸಲು ಪ್ರಭುತ್ವದ ವಿವಿಧ ಇಲಾಖೆಗಳ ಕೊಡುಗೆ ಅತಿ ಮಹತ್ವದ್ದು!




ಸಣ್ಣ ಮತ್ತು ಮಧ್ಯಮ ಪ್ರಮಾಣದ ಜಮೀನು ಇರುವ ಕೃಷಿಕರು, ವೈಯಕ್ತಿಕ ನೆಲೆಯಲ್ಲಿ ಕೈಗೊಳ್ಳಬಹುದಾದ ಒಂದು ಕ್ರಮವೆಂದರೆ, ಹೆಚ್ಚು ನೀರು ಅಗತ್ಯವಿಲ್ಲದ ಬೆಳೆಗಳಿಗೆ ಪ್ರಾಮುಖ್ಯತೆ ನೀಡಬೇಕು; ಮತ್ತು ಈಗ ಲಭ್ಯವಿರುವ ನೀರನ್ನು ಮಿತವಾಗಿ ಬಳಸಿ, ಸಂರಕ್ಷಿಸಿಕೊಳ್ಳಬೇಕು. ಆದರೆ ಈ ಕುರಿತು ಮಾಹಿತಿ, ಮಾರ್ಗದರ್ಶನ ಮತ್ತು ನೀತಿನಿಯಮಗಳನ್ನು ರೂಪಿಸುವುದು ಪ್ರಭುತ್ವದ ಕೈಕೆಳಗಿರುವ ಇಲಾಖೆಗಳು!

ಉದಾಹರಣೆಗೆ, ಮುಂದಿನ ಆರೆಂಟು ತಿಂಗಳುಗಳಲ್ಲಿ ಇಂತಹ ಬೆಳೆಯು ನಮ್ಮ ರಾಜ್ಯಕ್ಕೆ ಸೂಕ್ತ, ಇದರಿಂದಾಗಿ, ಕಡಿಮೆ ನೀರನ್ನು ಬಳಸಿಯೂ, ತಕ್ಕಮಟ್ಟಿಗಿನ ಆದಾಯ ಪಡೆಯಬಹುದು ಎಂದು ಅಧ್ಯಯನ ಮಾಡಿ, ಶಿಫಾರಸು ಮಾಡುವುದು, ಇಂತಹ ಇಲಾಖೆಗಳಿಂದ ಮಾತ್ರ ಸಾಧ್ಯ; ಅದು ಅವುಗಳ ಕರ್ತವ್ಯವೂ ಹೌದು. ಈ ಇಲಾಖೆಗಳು ಜನಸ್ನೇಹಿಯಾಗಿ ಕೆಲಸ ಮಾಡಲು, ಸೂಕ್ತ ಕಾಲದಲ್ಲಿ ಸಮನ್ವಯದಿಂದ ನಿರ್ಧಾರ ತೆಗೆದುಕೊಳ್ಳಲು ರಾಜಕಾರಣಿಗಳು ಮತ್ತು ಅಧಿಕಾರದ ಸೂತ್ರ ಹಿಡಿದವರು ಸಹಕರಿಸಬೇಕು, ನಿರ್ಧಾರ ತೆಗೆದುಕೊಳ್ಳಬೇಕು ಮತ್ತು ಅದು ಅವರ ಕರ್ತವ್ಯವೂ ಹೌದು.

ಏಕೆಂದರೆ, ಎಲ್ಲ ನಾಗರಿಕರ ಹಿತ ಕಾಯುವುದು ಪ್ರಭುತ್ವದ ಕೆಲಸ ತಾನೆ? ಇಲ್ಲಿ ಇನ್ನೂ ಒಂದು ಸೂಕ್ಷ್ಮ ಸಮಸ್ಯೆಯನ್ನು ಗುರುತಿಸಲೇಬೇಕು: ಪ್ರಭುತ್ವವು ಜನರ ಹಿತ ಕಾಯ ಬೇಕಾದರೆ, ಅದರ ಸೂತ್ರ ಹಿಡಿದವರು ಸಕಾಲದಲ್ಲಿ ತಕ್ಕ ನಿರ್ಣಯ ತೆಗೆದುಕೊಳ್ಳಬೇಕು; ಅದಕ್ಕೆ ರಾಜಕೀಯ ಸ್ಥಿರತೆಯೂ ಮುಖ್ಯ!

ರಾಜಕೀಯ ಸ್ಥಿರತೆ ಇಲ್ಲದೇ ಹೋದಾಗ, ವಿವಿಧ ಇಲಾಖೆಗಳ ನಿರ್ಣಯಗಳ ನಡುವೆ ಸಮನ್ವಯ ಸಾಧಿಸುವಲ್ಲಿ ತೊಡಕುಂಟಾಗಿ, ಜನರ ಮೇಲೆ ನೇರ ಪರಿಣಾಮ ಬೀರಬಲ್ಲದು.

2026ರಲ್ಲಿ ಅಧಿಕ ತಾಪಮಾನ, ಹೀಟ್‌ವೇವ್ ಮತ್ತು ಕಡಿಮೆ ಮಳೆ ಎಂದು ಈಗಾಗಲೇ ಹವಾಮಾನ ತಜ್ಞರು ಎಚ್ಚರಿಸಿದ್ದಾರೆ; ನಿಜ ಹೇಳಬೇಕೆಂದರೆ, ಎಲ್ ನಿನೋ ಎಂಬ ಗುಮ್ಮ ಎಲ್ಲರನ್ನೂ ಕಾಡುತ್ತದೆ ಎಂದೇ ಸ್ಪಷ್ಟವಾಗಿ ಹೇಳಿದ್ದಾರೆ.

ಅದೃಷ್ಟವೆಂದರೆ, ಎಲ್‌ನಿನೋ ವಿದ್ಯಮಾನವು ನಮ್ಮನ್ನೆಲ್ಲಾ ಈ ವರ್ಷದ ಇನ್ನುಳಿದ ತಿಂಗಳುಗಳಲ್ಲಿ ಕಾಡುತ್ತದೆ ಎಂದು ಮುಂಚಿತವಾಗಿಯೇ, ಈಗಾಗಲೇ ತಿಳಿದಿದೆ; ವಾತಾವರಣದ ವ್ಯತ್ಯಯದ ಈ ಪ್ರಮುಖ ಮತ್ತು ಖಚಿತ ಮಾಹಿತಿಯನ್ನು ಸೂಕ್ತವಾಗಿ ಬಳಸಿಕೊಂಡು, ಜನಸಾಮಾನ್ಯರ ಮತ್ತು ನಾಗರಿಕರ ಹಿತ ಕಾಯುವ ಕೆಲಸವನ್ನು ಜನನಾಯಕರು, ಪ್ರಾಜ್ಞರು ಮತ್ತು ಪ್ರಭುತ್ವದ ವಿವಿಧ ಇಲಾಖೆಗಳು ಮಾಡಬೇಕಾಗಿದೆ. ಎಲ್ಲರೂ ಎದ್ದೇಳಿ, 2026ರ ಎಲ್-ನೀನೋ ತರಲಿರುವ ಸಂಕಷ್ಟ ಎದುರಿಸಲು ಸಿದ್ಧರಾಗಿ, ಪ್ಲೀಸ್!

**- ಶಶಿಧರ** ಹಾಲಾಡಿ

---

# ಇಂದ್ರಿಯಗಳ ಪೈಪೋಟಿಯಲ್ಲಿ ಗೆದ್ದವರಾರು?

**» ಯಾವುದರ ನಿರ್ಗಮನದಿಂದ ಜೀವಿಯ ದೇಹವು ಜಡವಾಗುವುದೋ ಅದೇ ಎಲ್ಲಕ್ಕಿಂತ ಶ್ರೇಷ್ಠ ಎಂದರಂತೆ ಬ್ರಹ್ಮ ದೇವರು. ಇದನ್ನು ಕೇಳಿದ ನಂತರ ಇಂದ್ರಿಯಗಳು ತಮ್ಮ ಸ್ಪರ್ಧೆಯನ್ನು ಆರಂಭಿಸಿದವು. ಮೊದಲು ಇಂದ್ರಿಯಗಳ ಪೈಪೋಟಿಯಲ್ಲಿ ಗೆದ್ದವರಾರು? ಮಾತು ದೇಹದಿಂದ ಹೊರಗೆ ಹೋಗಿ ಒಂದು ವರ್ಷದ ನಂತರ ತಿರುಗಿ ಬಂದಿತಂತೆ.**


ಇಂದಿನ ಜೀವನದಲ್ಲಿ ಪೈಪೋಟಿಯದೇ ಕಾರುಬಾರು. ಒಬ್ಬರನ್ನೊಬ್ಬರು ಮೀರಿಸುವ ತವಕದಲ್ಲಿ ಬದುಕಿನ ಬಹುಪಾಲು ಸಮಯವನ್ನು ಕಳೆಯುತ್ತಾರೆ. ಹೋಲಿಕೆಯ ಸುಳಿಯಲ್ಲಿ ಸಿಲುಕಿ ಒಂದರ ನಂತರ ಒಂದು ಬಯಕೆಯನ್ನು ತಮ್ಮ ಗುರಿಯನ್ನಾಗಿ ಮಾಡಿಕೊಂಡು ಅದರ ಸಾಧನೆಗಾಗಿ ಪ್ರಯತ್ನದಲ್ಲಿ ತೊಡಗುವುದಕ್ಕೆ ಜೀವನ ಎಂಬ ಹೆಸರನ್ನಿಟ್ಟಿದ್ದಾರೆ.

ಮಾನವರ ಕತೆ ಹೀಗಾದರೆ, ಇಂದ್ರಿಯಗಳು ಕೂಡ ಒಮ್ಮೆ ಇದೇ ರೀತಿ ಸ್ಪರ್ಧೆಗೆ ಬಿದ್ದ ಕತೆಯೂ ಇದೆ. ಬಾಯಿ, ಕಣ್ಣು, ಕಿವಿ, ಮೂಗು, ಮನಸ್ಸು ಮತ್ತು ಜನನೇಂದ್ರಿಯಗಳು ತಮ್ಮ ಶ್ರೇಷ್ಠತೆಯನ್ನು ನಿರೂಪಿಸಲು ಹೊರಟವಂತೆ. ಅವೆಲ್ಲವೂ ಬ್ರಹ್ಮ ದೇವರ ಬಳಿ ಹೋದವು. ತಮ್ಮಲ್ಲಿ ಯಾರು ಶ್ರೇಷ್ಠರೆಂದು ಹೇಗೆ ನಿರ್ಧರಿಸುವುದು? ಎಂಬ ಅವುಗಳ ಪ್ರಶ್ನೆಗೆ, ಬ್ರಹ್ಮ ದೇವರು ಪರಿಹಾರವೊಂದನ್ನು ಹೇಳಿದರು.

ಯಾವುದರ ನಿರ್ಗಮನದಿಂದ ಜೀವಿಯ ದೇಹವು ಜಡವಾಗುವುದೋ ಅದೇ ಎಲ್ಲಕ್ಕಿಂತ ಶ್ರೇಷ್ಠ ಎಂದರಂತೆ ಬ್ರಹ್ಮ ದೇವರು. ಇದನ್ನು ಕೇಳಿದ ನಂತರ ಇಂದ್ರಿಯಗಳು ತಮ್ಮ ಸ್ಪರ್ಧೆಯನ್ನು ಆರಂಭಿಸಿದವು. ಮೊದಲು ಇಂದ್ರಿಯಗಳ ಪೈಪೋಟಿಯಲ್ಲಿ ಗೆದ್ದವರಾರು? ಮಾತು ದೇಹದಿಂದ ಹೊರಗೆ ಹೋಗಿ ಒಂದು ವರ್ಷದ ನಂತರ ತಿರುಗಿ ಬಂದಿತಂತೆ.

ಒಂದು ವರ್ಷಕಾಲ ಜೀವಿಯು ಮೂಕನಂತೆ ವ್ಯವಹರಿಸುತ್ತ ಇತರ ಇಂದ್ರಿಯಗಳ ಸಹಾಯದಿಂದ ಬದುಕನ್ನು ನಡೆಸಿದ್ದನು. ನಂತರ ಕಣ್ಣುಗಳು ಒಂದು ವರ್ಷ ಹೊರಗೆ ಹೋಗಿ ತಿರುಗಿ ಬಂದವು. ಆ ಅವಧಿಯಲ್ಲಿ ಜೀವಿಯು ಕುರುಡನಾಗಿ ತನ್ನ ಜೀವನವನ್ನು ಕಳೆಯುತ್ತಿದ್ದನು. ತದನಂತರ ಕಿವಿಯು ಹೊರಗೆ ಹೋಗಿ, ಒಂದು ವರ್ಷದ ನಂತರ ದೇಹಕ್ಕೆ ಹಿಂತಿರುಗಿತು. ಆ ಸಮಯದಲ್ಲಿ ಕಿವುಡತನ ಕೂಡಿದ ಜೀವನ ನಡೆಸುತ್ತಿದ್ದ ಜೀವಿ.

ನಂತರದ ಬಾರಿ ಮನಸ್ಸಿನದು. ಅದು ಕೂಡ ಹೊರಗೆ ಹೋಗಿ ಒಂದು ವರ್ಷದ ನಂತರ ಬಂದಿತು. ಜೀವಿಯು ಮುಗ್ಧನಂತೆ, ಏನೂ ತಿಳಿಯದನವಂತೆ ಇತರ ಇಂದ್ರಿಯಗಳ ಸಹಾಯದಿಂದ ಬದುಕಿದ್ದನು. ಇದೇ ರೀತಿ ಜನನೇಂದ್ರಿಯವು ಕೂಡ ಹೊರಗಿ ಹೋಗಿ ಒಂದು ವರ್ಷದ ನಂತರ ತಿರುಗಿ ಬಂದಿತು. ಆಗ ಜೀವಿಯು ಸಂತಾನೋತ್ಪತ್ತಿ ಇಲ್ಲದೆ ಇತರ ಇಂದ್ರಿಯಗಳ ಸಹಾಯದಿಂದ ಬದುಕಿದ್ದನು.



ಹೀಗೆ ಎಲ್ಲ ಇಂದ್ರಿಯಗಳು ತಮ್ಮ ಸರದಿಯನ್ನು ಮುಗಿಸಿದ ನಂತರ, ಪ್ರಾಣವು ಹೊರಗೆ ಹೋಗಲು ಅಣಿಯಾಯಿತು. ಆಗ, ಹೇಗೆ ಮನೆಯ ಆಧಾರವನ್ನು ಕೆಡವಿದಾಗ ಮೇಲ್ಛಾಗವು ಉರುಳಿ ಬೀಳುತ್ತದೆಯೋ, ಎಲ್ಲ ಇಂದ್ರಿಯಗಳೂ ತಮ್ಮ ಇರುವಿಕೆಯನ್ನು ಕಳೆದು ಕೊಂಡವು. ಇದರಿಂದ ಪ್ರಾಣವೇ ಮಹತ್ತರವಾದುದು ಎಂಬುದನ್ನು ಇಂದ್ರಿಯಗಳು ಅರಿತವು. ಪ್ರಾಣ ಎಂದರೆ ದೇಹವನ್ನು ವ್ಯಾಪಿಸಿ, ಇಡೀ ಜಗದಲ್ಲಿ ತುಂಬಿರುವ ಆತ್ಮ ಚೈತನ್ಯವೇ ಆಗಿದೆ.

ದೇಹ, ಇಂದ್ರಿಯಗಳು ಜಡ, ಅವು ಸ್ವತಂತ್ರವಾಗಿ ಕಾರ್ಯಗಳನ್ನು ಮಾಡಲಾರವು. ಆತ್ಮ ಚೈತನ್ಯದ ಬೆಳಕು ಅವುಗಳಿಗೆ ಚೇತನವನ್ನು ನೀಡಿ ಅವುಗಳನ್ನು ಕಾರ್ಯಸಮರ್ಥರನ್ನಾಗಿ ಮಾಡುತ್ತದೆ. ನಾವು ನಮ್ಮನ್ನು ದೇಹ ಎಂದು ಗುರುತಿಸಿಕೊಂಡಿದ್ದೇವೆ, ಆದರೆ ಇದು ಆದ್ಯಂತಿಕವಾದ ಸತ್ಯವಲ್ಲ ಎಂದು ವೇದಶಾಸ್ತ್ರಗಳು ಹೇಳುತ್ತವೆ.

ಪ್ರತ್ಯಕ್ಷ ದೇವತೆಯಾದ ಸೂರ್ಯನು ಹೇಗೆ ಸ್ವಯಂಪ್ರಕಾಶಮಾನನಾಗಿ ಇಡೀ ಜಗತ್ತನ್ನು ಬೆಳಗುವನೋ, ಅದೇ ರೀತಿಯಲ್ಲಿ ಆತ್ಮನು ಸ್ವಯಂ ಪ್ರಕಾಶನು. ತಾನು ಪ್ರಕಾಶಿಸುತ್ತ ಸಕಲ ಚರಾಚರಗಳನ್ನು ಬೆಳಗುತ್ತಿರುವ ಶುದ್ಧ ಚೈತನ್ಯ ವಸ್ತುವೇ ಆತ್ಮನು.

ಪ್ರಾಣವು ದೇಹದಲ್ಲಿ ಇದೆಯೆಂದರೆ ಅದು ಆತ್ಮದ ಬೆಳಕಿನಿಂದ ಚೇತನಮಯವಾಗಿದೆ ಎಂದರ್ಥ. ಇದೇ ಕಾರಣಕ್ಕಾಗಿಯೇ ಉಳಿದ ಎಲ್ಲ ಇಂದ್ರಿಯಗಳು ಚ್ಯುತಿಯಾದರೂ, ಜೀವಿಯ ಇರುವಿಕೆಯು ಅಬಾಧಿತವಾಗಿತ್ತು. ಯಾವಾಗ ಪ್ರಾಣನು ಹೊರಟನೋ ಆಗ ಉಳಿದ ಎಲ್ಲ ಇಂದ್ರಿಯಗಳು ತಮ್ಮ ಶಕ್ತಿಯನ್ನು ಕಳೆದುಕೊಂಡವು. ಬ್ರಹ್ಮ ದೇವರ ಸಂದೇಶದ ಗೂಢಾರ್ಥ ಇದೇ ಆಗಿತ್ತು.

ಇಂದ್ರಿಯಗಳು ತಾವೇ ಶ್ರೇಷ್ಠರು ಎಂದು ಅಹಂನಿಂದ ಬೀಗುತ್ತಿದ್ದವು. ಇದು ಮನುಜನ ಅಹಂಕಾರದ ಪ್ರತಿರೂಪವೂ ಹೌದು. ಪ್ರಪಂಚದ ವ್ಯವಸ್ಥೆಯನ್ನು ಅಗೋಚರ ಶಕ್ತಿಯೊಂದು ನಿಯಂತ್ರಿಸುತ್ತಿದೆ ಎಂಬುದನ್ನು ಒಪ್ಪಲು ಮನುಷ್ಯನಿಗೆ ಅವನ ಗರ್ವವು ಅಡ್ಡಗಾಲಾಗಿದೆ. ಇಂದ್ರಿಯಗಳ ಪೈಪೋಟಿಯ ಕತೆಯಿಂದ ಪಾಠ ಕಲಿಯುವ ಅವಶ್ಯಕತೆ ಇದೆ.

ತನ್ನದೇ ಸತ್ಕರ್ಮ ಮತ್ತು ದುಷ್ಕರ್ಮಗಳ ಕಾರಣದಿಂದ ಸುಖ, ಯಶಸ್ಸು, ದುಃಖ, ಸೋಲುಗಳು ತನಗೆ ಫಲಗಳಾಗಿ ಬರುತ್ತಿವೆ ಎಂಬುದನ್ನು ಮನುಷ್ಯ ಅರಿತರೆ ಅಹಂಕಾರದ ಪೊರೆಯು ಕಳಚಿ ಬೀಳುವುದು.

**- ವಿದ್ಯಾಶಂಕರ ಶರ್ಮ,** ಸಿದ್ದಾಪುರ

---

# ಮೌನದ ಮಹತ್ವ ಮತ್ತು ಮೀರಾಳ ಪಾಠ

> ಮಾತಿನ ಮಲ್ಲ ಆಮೆ ಹಾರಿ ಬೇರೆಡೆ ಹೋಗುವ ಅದ್ಭುತ ಯೋಜನೆ ಹಾಕಿತ್ತು. ತನ್ನ ಗೆಳೆಯರಾದ ಹಂಸಗಳು ಹಿಡಿದಿದ್ದ ಕೋಲನ್ನು ಬಾಯಲ್ಲಿ ಗಟ್ಟಿಯಾಗಿ ಕಚ್ಚಿ ಹಿಡಿದು ಅದು ಆಕಾಶದಲ್ಲಿ ಹೊರಟಿತ್ತು. ಆದರೆ ಕೆಳಗಿದ್ದ ಜನರು ತನ್ನನ್ನು ನೋಡಿ ಆಡಿಕೊಳ್ಳುತ್ತಿರುವುದನ್ನು ಕಂಡು, ತಡೆಯಲಾರದೆ ಅವರಿಗೆ ಉತ್ತರ ಕೊಡಲು ಬಾಯಿ ಬಿಟ್ಟಿತು. ಅಷ್ಟೇ, ಕೆಳಗೆ ಬಿದ್ದು ಪ್ರಾಣ ಕಳೆದುಕೊಂಡಿತು. ನೆನಪಾಯಿತಲ್ಲವೇ? ಅನನ್ಯಗೆ ಹೌದೆನ್ನಿಸಿತು. ಅವಳು ಸಮಾಧಾನವಾಗುತ್ತಿರುವುದನ್ನು ಗಮನಿಸಿದ ಮೀರಾ ಮತ್ತೊಂದು ಉದಾಹರಣೆ ನೀಡಿದಳು. ಇನ್ನೊಂದು ಕಥೆ ಇತ್ತಲ್ಲ, ಜಗಳಗಂಟ ಕುರಿಗಳದ್ದು?

ಸಂಜೆಯ ಹೊಂಬೆಳಕು ಕಿಟಕಿಯ ಮೂಲಕ ಒಳಬರುತ್ತಿತ್ತು. ಮೀರಾ ತನ್ನ ನೆಚ್ಚಿನ ಮೂಲೆಯಲ್ಲಿ ಕುಳಿತು ಚಿತ್ರ ಬಿಡಿಸುತ್ತಿದ್ದಳು. ಆಗ ಅವಳ ಮಗಳು ಅನನ್ಯ ಕೋಪದಿಂದ ಸಿಡಿಮಿಡಿಗೊಳ್ಳುತ್ತಾ ಒಳಗೆ ಬಂದಳು. ಯಾವುದೋ ಸಣ್ಣ ವಿಷಯಕ್ಕಾಗಿ ಗೆಳತಿಯ ಜೊತೆ ನಡೆದ ಜಗಳ ಅವಳನ್ನು ಅಸಮಾಧಾನಗೊಳಿಸಿತ್ತು. ಸಿಟ್ಟಿನಿಂದ ತನ್ನ ಪುಸ್ತಕಗಳನ್ನು ಮತ್ತು ಜ್ಯಾಮಿತಿಯ ಪೆಟ್ಟಿಗೆಯನ್ನು ಮೇಜಿನ ಮೇಲೆ ಬಿಸಾಕಿದಳು.

ಮೀರಾ ತನ್ನ ಪೆನ್ಸಿಲ್ ಬದಿಗಿಟ್ಟು, ಮಗಳನ್ನು ಹತ್ತಿರ ಕರೆದು ಪ್ರೀತಿಯಿಂದ ನಗುತ್ತಾ ಕುಳಿತುಕೊಳ್ಳಲು ಹೇಳಿದಳು. ಏನೋ ದೂರು ಹೇಳಲು ಬಯಸಿದ ಅನನ್ಯ ಅಮ್ಮನ ಮುಖ ನೋಡಿದಳು; ಅಮ್ಮನ ಆ ಪ್ರಶಾಂತವಾದ ನಗುಮುಖ ನೋಡಿ ಅವಳ ಬಾಯಿಂದ ಮಾತು ಹೊರಡಲಿಲ್ಲ. ಅನನ್ಯಳ ಅಮ್ಮ ಯಾವಾಗಲೂ ಹೀಗೆಯೇ ನಗುಮುಖದಿಂದಲೇ ಮಾತನಾಡಿಸುತ್ತಿದ್ದಳು.

ನೋಡು ಅನನ್ಯ, ನೀನು ಜಗಳಾಡುತ್ತಿದ್ದುದು ಇಲ್ಲಿಯವರೆಗೂ ಕೇಳಿಸಿತು. ಬೇಜಾರು ಮಾಡಿಕೊಳ್ಳಬೇಡ. ಯಾವಾಗ ಸುಮ್ಮನಿರಬೇಕು ಎಂದು ತಿಳಿಯುವುದೇ ನಿಜವಾದ ಬುದ್ಧಿವಂತಿಕೆ, ಗೊತ್ತಾ? ಎಂದು ಮೀರಾ ಶಾಂತವಾಗಿ ಕೇಳಿದಳು. ನಿನಗೆ ಆ ಮಾತಿನ ಮಲ್ಲ ಆಮೆಯ ಕಥೆ ಹೇಳಿದ್ದೆನಲ್ಲ, ನೆನಪಿದೆಯಾ? ಪಂಚತಂತ್ರದಲ್ಲಿ ಬಂದಿತ್ತು.

ಅನನ್ಯ ಒಲ್ಲದ ಮನಸ್ಸಿನಿಂದಲೇ ಹೂಂ ಎಂದು ತಲೆಯಲ್ಲಾಡಿಸಿದಳು. ಅವಳ ಮನಸ್ಸಿನಲ್ಲಿ ಇನ್ನೂ ದೂರುಗಳೇ ತುಂಬಿದ್ದವು ಗೆಳತಿ ಮಾಡಿದ ತಪ್ಪುಗಳು, ಅವಳು ತನಗೆ ಕೊಡಬಾರದಿದ್ದ ನೋವು, ಇವೆಲ್ಲವೂ ಆಲೋಚನೆಗಳಾಗಿ ಸುಳಿಯುತ್ತಿದ್ದವು.

ಮೀರಾ ಮುಂದುವರಿಸಿದಳು, ಆ ಮಾತಿನ ಮಲ್ಲ ಆಮೆ ಹಾರಿ ಬೇರೆಡೆ ಹೋಗುವ ಅದ್ಭುತ ಯೋಜನೆ ಹಾಕಿತ್ತು. ತನ್ನ ಗೆಳೆಯರಾದ ಹಂಸಗಳು ಹಿಡಿದಿದ್ದ ಕೋಲನ್ನು ಬಾಯಲ್ಲಿ ಗಟ್ಟಿಯಾಗಿ ಕಚ್ಚಿ ಹಿಡಿದು ಅದು ಆಕಾಶದಲ್ಲಿ ಹೊರಟಿತ್ತು. ಆದರೆ ಕೆಳಗಿದ್ದ ಜನರು ತನ್ನನ್ನು ನೋಡಿ ಆಡಿಕೊಳ್ಳುತ್ತಿರುವುದನ್ನು ಕಂಡು, ತಡೆಯಲಾರದೆ ಅವರಿಗೆ ಉತ್ತರ ಕೊಡಲು ಬಾಯಿ ಬಿಟ್ಟಿತು. ಅಷ್ಟೇ, ಕೆಳಗೆ ಬಿದ್ದು ಪ್ರಾಣ ಕಳೆದುಕೊಂಡಿತು. ನೆನಪಾಯಿತಲ್ಲವೇ?

ಅನನ್ಯಗೆ ಹೌದೆನ್ನಿಸಿತು. ಅವಳು ಸಮಾಧಾನವಾಗುತ್ತಿರುವುದನ್ನು ಗಮನಿಸಿದ ಮೀರಾ ಮತ್ತೊಂದು ಉದಾಹರಣೆ ನೀಡಿದಳು. ಇನ್ನೊಂದು ಕಥೆ ಇತ್ತಲ್ಲ, ಜಗಳಗಂಟ ಕುರಿಗಳದ್ದು? ನಮ್ಮ ಪರಂಪರೆಯ ಇಂತಹ ಕಥೆಗಳಲ್ಲಿ ಬಹಳ ಜಾಣ್ಮೆ ಅಡಗಿದೆ. ಈ ಕುರಿಗಳು ಅಹಂಕಾರದಲ್ಲಿ ಮುಳುಗಿ ತಮ್ಮ ಸುರಕ್ಷತೆಯನ್ನೇ ಮರೆತವು. ಒಬ್ಬರ ಮೇಲೊಬ್ಬರು ದ್ವೇಷ ಸಾಧಿಸಲು ಹೋಗಿ ಸುಸ್ತಾಗಿ, ಕೊನೆಗೆ ಬೇರೊಂದು ಪ್ರಾಣಿಗೆ ಆಹಾರವಾದವು. ಇಬ್ಬರ ಜಗಳ ಮೂರನೆಯವರಿಗೆ ಲಾಭ! ಅನಗತ್ಯವಾಗಿ ವಾದ ಮಾಡುವುದು ನಮಗೆ ನಾವೇ ತೋಡಿಕೊಳ್ಳುವ ಹಳ್ಳವಿದ್ದಂತೆ.

ಅನನ್ಯಳಿಗೆ ಈಗ ತನ್ನ ತಪ್ಪಿನ ಅರಿವಾಗತೊಡಗಿತು. ಎಂತಹ ತಪ್ಪು ಮಾಡಿದೆ, ಗೆಳತಿಯ ಜೊತೆ ಅನಗತ್ಯವಾಗಿ ವಾದಕ್ಕಿಳಿದೆ ಎಂದು ಮನಸ್ಸಿನಲ್ಲೇ ಅಂದುಕೊಂಡಳು. ಮೀರಾ ಕೊನೆಯದಾಗಿ ಮತ್ತೊಂದು ಉದಾಹರಣೆ ನೀಡಿದಳು, ಮಾತನಾಡುವ ಗುಹೆಯ ಕಥೆಯೂ ಇದೇ ಜಾಣ್ಮೆಯನ್ನು ವಿಸ್ತರಿಸಿ ಹೇಳುತ್ತದೆ. ಅಪಾಯದಲ್ಲಿದ್ದ ನರಿ ಸುಮ್ಮನೆ ಗುಹೆಯೊಳಗೆ ಹೋಗಲಿಲ್ಲ; ಮೊದಲು ಅಲ್ಲಿನ ಮೌನವನ್ನು ಪರೀಕ್ಷಿಸಿ ಸುರಕ್ಷತೆಯನ್ನು ಖಚಿತಪಡಿಸಿಕೊಂಡಿತು. ನಿನಗೆ ಬೇಕಿಲ್ಲದ ವಿಷಯಗಳ ಬಗ್ಗೆ ವಾದಿಸಿ ನಿನ್ನನ್ನು ನೀನು ಸಮರ್ಥಿಸಿಕೊಳ್ಳಬೇಕು ಎನಿಸಿದಾಗ ಈ ಮಾತು ನೆನಪಿರಲಿ: ಅನಗತ್ಯ ಮಾತು ನಮ್ಮ ಶಕ್ತಿಯನ್ನು ವ್ಯರ್ಥ ಮಾಡುತ್ತದೆ ಮತ್ತು ಸಮಸ್ಯೆಗಳನ್ನು ಹೆಚ್ಚಿಸುತ್ತದೆ.


ಅಮ್ಮನ ಮಾತು ಕೇಳಿದ ಅನನ್ಯ ನಿರಾಳಳಾದಳು. ಜಗಳದಲ್ಲಿ ಗೆಲ್ಲಲೇಬೇಕು ಎಂದು ಹಠ ಹಿಡಿಯುವುದು ಅನಿವಾರ್ಯವಲ್ಲ, ಅದು ಕೇವಲ ತನ್ನ ಆಯ್ಕೆಯಾಗಿತ್ತು ಎಂಬ ಸತ್ಯ ಅವಳಿಗೆ ಅರಿವಾಯಿತು. ಬೇಡದ ವಿಷಯಕ್ಕೆ ಮಾತನಾಡಿ ಸುಮ್ಮನೆ ಬೇಸರ ತಂದುಕೊಂಡೆ ಎಂದು ಅವಳಿಗೆ ಪಶ್ಚಾತ್ತಾಪವಾಯಿತು.

**- ಹರಿ** ಪ್ರಸಾದ್



---

# ಪ್ರಕೃತಿಯ ನೈಸರ್ಗಿಕ ಉಚಿತ ಔಷಧಗಳು




ನೈಸರ್ಗಿಕ ಔಷಧಗಳು

1. ಬೇಗ ಮಲಗವುದು ಮತ್ತು ಬೇಗ ಎದ್ದೇಳುವುದು ಔಷಧ.
2. ಓಂಕಾರ ಪಠಣ, ಅಥವಾ ತಮ್ಮ ತಮ್ಮ ಇಷ್ಟ - ಕುಲ ದೇವರ ನಾಮಸ್ಮರಣೆಯೂ ಒಂದು ಔಷಧಿ.
3. ಯೋಗ, ಪ್ರಾಣಾಯಾಮ, ಧ್ಯಾನ ಮತ್ತು ವ್ಯಾಯಾಮವೂ ಔಷಧ.
4. ಬೆಳಿಗ್ಗೆ ಮತ್ತು ಸಂಜೆ ನಡೆಯಯುವುದು ಔಷಧ.
5. ಉಪವಾಸವು ಎಲ್ಲಾ ರೋಗಗಳಿಗೆ ಔಷಧ.
6. ಸೂರ್ಯನ ಬೆಳಕು ಕೂಡ ಔಷಧ.
7. ಮಣ್ಣಿನ ಪಾತ್ರೆಯಲ್ಲಿನ ನೀರು ಕುಡಿಯುವುದು ಕೂಡ ಔಷಧ.
8. ಚಪ್ಪಲಿ ಧರಿಸುವುದು ಕೂಡ ಔಷಧ.
9. ಆಹಾರವನ್ನು ಸಂಪೂರ್ಣವಾಗಿ ಜಗೆದು ತಿನ್ನುವುದು ಕೂಡ ಔಷಧ.
10. ಆಹಾರವನ್ನು ಸೇವಿಸಿದ ನಂತರ ನೀರು ಕುಡಿಯುವುದು ಮತ್ತು ನೀರಿನಂತೆ ಆಹಾರವನ್ನು ಸೇವಿಸುವುದು ಕೂಡ ಔಷಧ.
11. ಆಹಾರ ಸೇವಿಸಿದ ನಂತರ ಸ್ವಲ್ಪ ಹೊತ್ತು ಬಿಸಿಲಿನಲ್ಲಿ ಕುಳಿತುಕೊಳ್ಳುವುದು ಕೂಡ ಔಷಧ.
12. ಸಂತೋಷವಾಗಿರಲು ನಿರ್ಧರಿಸುವುದು ಕೂಡ ಔಷಧ.
13. ಕೆಲವೊಮ್ಮೆ ಮೌನವೂ ಔಷಧ.
14. ಹಾಸ್ಯವೂ ಔಷಧ.
15. ತೃಪ್ತಿ ಒಂದು ದಿವ್ಯ ಔಷಧ.
16. ಮನಸ್ಸಿನ ಶಾಂತಿ ಮತ್ತು ಸ್ವಚ್ಛತೆಯ ದೇಹವು ಸಹ ಔಷಧವಾಗಿದೆ.
17. ಪ್ರಾಮಾಣಿಕತೆ ಮತ್ತು ಸಕಾರಾತ್ಮಕತೆಯೂ ಔಷಧವಾಗಿದೆ.
18. ನಿಸ್ವಾರ್ಥ ಪ್ರೀತಿಯೂ ಔಷಧವಾಗಿದೆ.
19. ಎಲ್ಲರಿಗೂ ಒಳ್ಳೆಯದನ್ನು ಬಯಸುವುದು ಮತ್ತು ಒಳಿತು ಮಾಡುವುದು, (ದಾನ) ಕೂಡ ಔಷಧವಾಗಿದೆ.
20. ಗುರು ಯಾರೊ? ಅವರ ಆಶೀರ್ವಾದವನ್ನು ಗಳಿಸಲು ಸೇವಾಕೆಲಸ ಮಾಡುವುದು ಕೂಡ ಔಷಧವಾಗಿದೆ.
21. ಎಲ್ಲರೊಂದಿಗೆ ಒಟ್ಟಿಗೆ ವಾಸಿಸುವುದು ಔಷಧವಾಗಿದೆ.
22. ತಿನ್ನುವುದು, ಕುಡಿಯುವುದು ಮತ್ತು ಕುಟುಂಬದೊಂದಿಗೆ ಸಮಯ ಕಳೆಯುವುದು ಸಹ ಔಷಧವಾಗಿದೆ.



23. ನಿಮ್ಮ ಪ್ರತಿಯೊಬ್ಬ ನಿಜವಾದ ಮತ್ತು ಒಳ್ಳೆಯ ಸ್ನೇಹಿತನಿಗೆ ಹಣವಿಲ್ಲದೆ ಸಂಪೂರ್ಣ ವೈದ್ಯಕೀಯ ಚಿಕಿತ್ಸೆಯ ಅಗತ್ಯವೆಂದರೆ, ಆತನೊಂದಿಗೆ + ಆಕೆಯೊಂದಿಗೆ, ಪ್ರೀತಿ, ಗೌರವ, ವಿಶ್ವಾಸದ ವರ್ತನೆಯೂ ಸಹ ಒಂದು ದಿವ್ಯೌಷಧ.
24. ಸಂತೋಷ, ಕಾರ್ಯನಿರತ, ಆರೋಗ್ಯಕರ ಮತ್ತು ಹರ್ಷಚಿತ್ತದಿಂದ ಇರುವುದು ಸಹ ಔಷಧವಾಗಿದೆ.
25. ಪ್ರತಿ ಹೊಸ ದಿನವನ್ನು ಪೂರ್ಣವಾಗಿ ಆನಂದಿಸುವುದು ಸಹ ಔಷಧವಾಗಿದೆ.
26. ಮತ್ತು ಅಂತಿಮವಾಗಿ... ಈ ಸಂದೇಶವನ್ನು ಸಂತೋಷದಿಂದ ಯಾರಿಗಾದರೂ ಕಳುಹಿಸುವ ಮೂಲಕ ಒಂದು ದೊಡ್ಡ ಕಾರ್ಯವನ್ನು ಮಾಡಬಹುದು. ಮಾಡುವುದರಿಂದ ಸಿಗುವ ಆನಂದವೂ ಔಷಧವೇ.

ಪ್ರಕೃತಿಯ ಶ್ರೇಷ್ಠತೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸುವುದು, ಕೂಡ ಒಂದು ದಿವ್ಯ ಔಷಧಿ.

# SRS PRAJNA VIDYA SCHOOL

AFFILIATED TO CISCE, NEW DELHI | SCHOOL CODE - KA 409/2020

PRESCHOOL | PRIMARY | SECONDARY | SENIOR SECONDARY

Unit - 1: Shankar Mutt Road, K.R. Puram, HASSAN - 573201

Unit - 2 : Hassan-Mysuru Main Road, KIADB, HASSAN - 573201

08172-262728, 9448301389 srsprajna2016@gmail.com srsprajnavidyaschool.edu.in

CISCE NEW DELHI — COUNCIL FOR THE INDIAN SCHOOL CERTIFICATE EXAMINATIONS

Empowering Minds & Transforming Lives since 1958

SRS PRAJNA — FOR SUCCESS TODAY AND TOMORROW

# GRADE 10 ICSE RESULT 2025-26



98% — 1 — Thanvika



97.6% — 2 — Akshay S Gowda



97% — 3 — Shimsana M

## 100% RESULT

**Centum: 17**

**Distinctions: 78**

**First Class: 18**

*Congratulations to our Achievers*

- Mokshitha J.B — 96.8%
- Pavan.H.H — 96.8%
- Rishith. R — 96.8%
- Supriya S — 96%
- Abhay Athreyas — 95.6%
- Deeksha. S — 95.6%
- Rakesh C.K — 95.6%
- Devika.M.S — 95.4%
- Dhanya. H.L — 95.4%
- Priyanka. Y. P — 95.2%
- Monvitha. M — 94.4%
- Sandhya S — 94.4%
- Jhansi Rani R — 94%
- Bhuvan Gowda. S. V — 93.6%
- Vijayarama. B.R — 93.6%
- Rahul Gowda A — 93.4%
- Vaishnavi V — 93.2%
- Monisha B S — 93%
- Samadh Nadaf — 92.8%
- Sanjana — 92.8%
- Sanvi. P — 92.4%
- Preetham Gowda K — 92.2%
- Yuvaraj H.N — 92%
- Dhanush. K. Gowda — 91.8%
- Daksh H Kumar — 91.4%
- Ayush M — 91.2%
- Surabhi J.R — 91.2%
- Dheemanth. V. Gowda — 91%
- Manith C U — 91%
- Dushyanth Gowda.C.V — 90.4%
- Rayaan Sharief N — 90%
- Punyashree B S — 89.4%
- Sameeksha .H. S — 89.2%
- Tejas. J. P — 89.2%
- Moulya.B.M — 89%
- V. Hariprasad — 89%
- Chaithanya C.R — 88.8%
- Ayeeman Fathima — 88.6%
- Sonika B — 88.4%
- Jaza Akhtar — 88.2%
- Kumar Aryan — 88%
- Poorvika H.G — 87.8%
- Bhoomika P V — 87.6%
- Mokshitha. B.Y — 87.4%
- Kulaj Gowda. M. D — 87%
- Haris Zaif B E — 86.8%
- Srinika J — 86.6%
- A.R Mithun — 86.2%
- Dimpal Gowda. D — 86.2%
- Jeevan Kumar L.R — 86%
- Likitha H C — 86%
- Parinith P Shetty — 86%
- Madhurya J — 85.8%
- Yashavanth.N.K — 85.6%
- Bhoomika K — 85.4%
- Dheemanth R — 85.4%
- Thejas Gowda K.V — 85.2%
- Gana Shree H H — 85%
- Pushti.P.L — 85%
- Daksh Gowda — 84.8%
- Monika. H. D — 84.2%
- Abhish. H. D — 84%
- Jeevitha.H.T — 83.4%
- Vinuprathik.G.P — 83.2%
- Prapthi Yogesh.K — 83%
- Nuthana. V. Gowda — 82.8%
- Yashas D S — 82.8%
- Impana — 82.4%
- Bhavyashree.H.N — 82%
- Kushal Gowda.V — 82%
- Joshitha — 81.4%
- Diganth N Gowda — 80.2%
- Hadiya Hermain — 80%
- Monisha. D — 80%
- Bhuvan B S — 79.8%

| No. of students appeared for exam | 96 |
|---|---|
| 95% and above | 13 |
| 90% and above | 21 |
| 85% and above | 28 |
| 80% and above | 15 |
| 75% and above | 13 |
| 70% and above | 6 |

**TOP SCORERS**

| Marks | No. of students |
|---|---|
| 100 | 17 |
| 99 | 24 |
| 98 | 29 |
| 97 | 27 |
| 96 | 53 |
| 95 | 24 |

## SRS PRAJNA VIDYA SCHOOL-Unit 1

# PUC-ISC Science Stream

# NEET-JEE 2026-27

# ADMISSIONS OPEN!

## SRS PRAJNA VIDYA SCHOOL-Unit 2

To be affiliated to ICSE From Nursery to Grade 8

Hassan-Mysuru Main Road, KIADB, Hassan - 573201

# Enroll Now!



ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019